ಶ್ರೀ.

ಜಯ ಶ್ರೀಕೃಷ್ಣ ಭಗವಾನ್.

# ಬಾಲಿಕಾ ಗೀತಾವಳಿ

ಮೊ॥ ರಾಮಶೇಷಶಾಸ್ತ್ರಿಗಳಿಂದ.

ರಚಿಸಲ್ಪಟ್ಟು

ಹರಿಹರೇಶ್ವರಂ ಗೋವಿಂದಯ್ಯ

ಇವರಿಂದ

ಪ್ರಕಟಿಸಲ್ಪಟ್ಟು

ಶ್ರೀ ಕಾಮೇಶ್ವರೀ ಮುದ್ರಾಕ್ಷರಶಾಲೆಯಲ್ಲಿ

ಮುದ್ರಿಸಲ್ಪಟ್ಟಿತು

1921

Registered Copy-Right.

ಶ್ರೀರಸ್ತು.

# ಬಾಲಿಕಾಗೀತಾವಳಿ.

## ಲಲಿತಾಸ್ತುತಿ.

ರಾಗ-ನಾಟಿ-ಆದಿತಾಳ.

(ಕರುಣಾಚಂದ್ರಿಕೆ ಎಂಬಂತೆ.)

ಲಲಿತೆಪಾಲಯ । ಶ್ರೀಕರಿ ॥ ಪಲ್ಲವಿ ॥ ಆಲವಾಲಸಿಚ್ಚ ನಾಭಿಜಾತಕಲರೋವುವಲ್ಲಿ । ಫಾಲವಕ್ಷಜಾತಯುತೆ । ಬಾಲಚಂದ್ರಕೃತಮೌಳಿವಿಭೂಷಣಿ । ಶೈಲರಾಜಕುಲಪ ಪಾವನಪಾವನೆ ॥೧॥ ವೀಟಿಕಾವಳಿರಸಾರುಣಿತೋಜ್ವಲ ಲಲೋಲವಮಂದಹಸಿತಾಧರಭೂಷಿಣಿ । ಚೇಟಿಕಾವರಸ ಮರ್ಪಿತಭೂಷಣೆ । ಪಾಟವಂದಿಶಕೃಪಾಕರಿಶಂಕರಿ ॥ ಜಂಭವೈರಿಮುಖದೇವಪರಿಪೂಜಿತದಂಭನಾಶನಕೃತಾರ್ಥ ರೂಪಿಣಿ । ಶಂಭುಮೋಹಿನಿನಿರಂಜನರೂಪಿಣಿಶುಂಭದ್ಯ ತ್ಯರಿಪುದಾರಣಕಾರಣೆ ॥

## ಈಶ್ವರ ಪ್ರಾರ್ಥನೆ.

ರಾಗ-ಬೇಗಡ-ಆದಿತಾಳ.

(ಅಂಬತ್ರಿಪುರಸುಂದರಿ ಎಂಬಂತೆ.)

ಶ್ರೀಕಂಠಮಹಸ್ಸೇನಮೋ ॥ ವಾಕಂಕುರುವಾಮಹೆ। ಶ್ರೀಕಾಯಪರಮಾತ್ಮನೆ ॥ ಪಲ್ಲವಿ ॥ ಶ್ರೀಕಂಠಪದಜುಷಿ ಲೋಕಮರಿತನುಷೆ ॥೧॥ ಶ್ರೀದಯಕುಮತವಿ । ಬೇ

ದಾಯಧ್ಯಾತಸಂ । ಮೋದಾಯಶ್ರೀಕರ । ಪಾದಾಯ
ತುಮೆಹರಿಣಾಂಕಪಾಣಿ ||೨|| ಸೂರ್ಯಾಗ್ನಿನಿಶಿಕರ । ರಾ
ರಾಜಿದಂಬಕ । ಧೀರಾಯುಸವನವಿ । ದಾರಾಯತಂಕರು
ಣಾಳವೆನಪೊ || ||೩||

ವಿಷ್ಣುಸ್ತುತಿ.

ತ್ರಾಳ-ಶಂಕರಾಭರಣ-ತಾಳ ಮಿಶ್ರಜಾತಿಜಾಪ್.

(ಪಾರ್ವತೀಪತೆಪೊರೆ ಎಂಬಂತೆ.)

ಶ್ರೀಪತೆಪೊರೆದಯದಿಂ || ಪಲ್ಲವಿ || ಗೋಪಿಜನಂಗಳ
ಮುದಾಕರಸದಾಕರಸುಖಂಕರಹರಿ ||ಅನುಪಲ್ಲವಿ || ಸರ
ಸಿಜಾಸನಮುಖಾಮರನುತ || ಸ್ಮರಹರಸಖ । ಸರಸಿ
ರುಹಮುಖ ||೧|| ಜಲರುಹಾಸನಮಯೋಧರತನು । ವಿ
ಲಸಿತಪದ । ನಳಿನಯುಗಹರೆ ||೨|| ಗೋಪಿಕಾಜನಮ
ನೋಹರವರ । ಸುರವರದಯಾ । ಕರಮುರಾರಿಯೆ ||

ಸೊಂಡಿಗೆ ಪ್ರಸ್ತದಲ್ಲಿ ಹೇಳುವಹಾಡು.

ರಾಗ-ಜಂಗಲ್-ಆದಿತಾಳ.

ಪಾರಿತುಪಾರಿತುಪಡೆಮೃಗಪ್ರೋತ ಎಂಬಂತೆ.

ಶ್ರೀಗಣೇಶ ನಿನ್ನೀಗಲೆಪೂಜಿಪೆ । ಬೇಗನೆಕಾರ್ಯಗ
ಳಾಗಲುಮಣಿದು । ಆದಿಮೂರುತಿನಿನ್ನ । ಪಾದವಪೂ
ಜಿಸಿ । ಮೋದಕಗಳನಾಮೋದದಿಕೊಡುವೆ ||೧|| ವಾ
ಣಾವದನನೆಕ್ರೂರವಿಘ್ನಗಳ । ದೂರುತೆವರಗಳವಾರವನಿ
ತ್ತೈ ||೨|| ಮೂಷಕದೇವನೆ । ದೋಷವಿದೂರನೆ । ಪೋ
ಷಿತವರಿಜನ । ಕೇಶವನುತನೆ || ||೪||



ಗೋದಿವೆ ಕಲ್ಲಿಡುವಹಾಡು.

ರಾಗ-ಶಂಕರಾಭರಣ-ತಾಳ-ಮಿಶ್ರಜಾತಿ-ಜಾಪ್.

(ಮುದ್ದುಲಪೆಂಡ್ಲಿಕುಮಾರ ಎಂಬಂತೆ-)

ಜಯಜಯಬಾಲಗೋಪಾಲ। ಲೀಲಾಜಾಲ ||ಪಲ್ಲವಿ||
ಜಯಬಾಲಗೋಪಾಲ । ಜಯಭಕ್ತಪರಿಪಾಲ । ಜಯ
ಮಂಗಳಶೀಲ । ಜಯವಾರಿದನೀಲ ||೧|| ಪದ್ಮನಾಭ
ನಪ್ರಸ್ತದೊಳಗಿತಂದೆಲ್ಲರು । ಮುದತಿಗೋಧಿಕಲ್ಲ ||
ನೊಡವಿಶಿಡಿರಪೇಳ್ವೆ ||೨|| ಹರಿಯನುವಂದಿಸಿಗುರುಗಳ
ಧ್ಯಾನಿಶಿ । ಶರಿವದನನಮಿಸಿ । ಹರುಷದಿಂದಲೆಕೂಡಿ ||
ಭಾರತಿಮೊದಲಾದ । ನಾರಿಯರೆಲ್ಲರು । ಹೀರಹಾರಗಳ
ಟ್ಟು । ಸಾರಿದರಾಗಲೆ ||೪|| ಅಕ್ಷತೆಗಳಮಾಡಿಪಕ್ಷ್ಮ ||
ಲಾಕ್ಷಿಯರೆಲ್ಲ । ಲಕ್ಷ್ಮೀಶನಿದಿರೊಳ-ವೀಕ್ಷಿಸುತಿರಲಾಗ
ರನ್ನಗೋದುವೆಗಳನ್ನಯಿಂತುಂಬುತ । ಬಿನ್ನಾಣಿಸುತ
ಲಾ । ಕನ್ನೆಯರ್ಬೀಸಿದರ್ || ||೫||

ಅರಸಿನ ಕುಟ್ಟುವಹಾಡು.

ರಾಗ-ಜಂಜೂಟಿ-ತಾಳರೂಪಕ.

(ಇಂದುವದನೆ ಎಂಬಂತೆ.)

ಸುಪ್ರಿಶ್ರೀಕರಾದಿಜಾತೆ । ಸುಪ್ರಿಶ್ರೀಸನ್ನುತೆ ||ಪಲ್ಲ||
ಸುಪ್ರಿಲೋಕಪೂಜಚರಿತೆ । ಸುಪ್ರಿಸನ್ನುತೆ ||ಅನು||
ಪಟ್ಟಸೀರೆಗಳನುಮೋದ । ದುಟ್ಟುಸತಿಯರು । ದಿಟ್ಟತ
ನದೊಳರಸಿನವನುಕುಟ್ಟುತಿರ್ದರು ||೨|| ಹಾರಹೀರಗಳ
ನುಧರಿಶಿಚಾರುಭೂಷಣಂ । ಭೂರಿಮೋದದಿಂದಲೈದಿಸಾ
ರುತಿರ್ದರು || ದಿವ್ಯಕಂಕಣಂಗಳತೊಟ್ಟುಸವ್ಯಸತಿಯ
ರು । ಶ್ರಾವ್ಯಮಾಡುಗಾನದಿಂದ । ಭವ್ಯಮೆನಿಸಲು ||

### ಅರಸಿನ ಕುಟ್ಟುವಾಗ ಹೇಳುವಹಾಡು.

ರಾಗ-ನಾಯುಕಿ-ಮಿಶ್ರಜಾತಿ-ಚಾಪ್.

(ಶೀತಕಿರಣನೆನ್ನ ಘಾತಿಪುದುಚಿತವೆ ಎಂಬಂತೆ.)

ಆರತಿಬೆಳಗಿರೆ । ಶ್ರೀರಮಣೀಶಗೆ । ತಾಮರಸಾಕ್ಷನಿಗೆ ॥ಪಲ್ಲ॥ ಚಾರುಭೂಷಣವಶರೀರದಿಧರಿಪಗೆ । ರಾರಾಜಿಸುವನಿಗೆ । ಹೀರದತಟ್ಟೆಯೊಳ್ ॥೧॥ ಹೇಮಾಂಬರವನುನೇಮದಿಧರಿಪಗೆ । ಸಾಮಜಪಾಲನಿಗೆ । ಶ್ರೀಮಹಾರುಕ್ಮಿಣಿಭಾಮಾಸಮೇತಗೆ । ಪ್ರೇಮಾತಿಶಯದೊಳು ॥ ಹೇಮದತಟ್ಟೆಯೊಳ್ ॥೨॥ ಮಂಜುಳಕಾಯಗೆರಂಜಿತಭೂಷಗೆ । ಕುಂಜರಪೋಷನಿಗೆ । ಕಂಜಾಂಬಕೀಯರು ಮಂಜುಳಕರಗಳಿಂ। ಶಿಂಜನೀಕೃತಶೇಷಕಂಜಾತನಯನಗೆ

### ಅದೇಕಾಲದಲ್ಲಿ ವಧುವಿಗೆ ಆರತಿಯುತ್ತುವ ಹಾಡು.

ರಾಗ-ಹಿಂದುಸ್ತಾನಿ-ಕಾಪಿ-ತಾಳ-ಚತುರಶ್ರಜಾತಿ.

(ರಮ್ಮನವೇಸಾಮಿನಿ ಎಂಬಂತೆ ಏಕತಾಳ.)

ಆರತಿಯುಬೆಳಗಿರೆ॥ಪ॥ ಸಾಗನಾಭಮುಖಿಶ್ರೀರಮಣೀಶಗೆ ॥ಅನುಪಲ್ಲ॥ ಕಡಗುಕಂಕಣಗಳಬೆತಗಿನಿಂಧರಿಸುತೇ ಬಡವರಪೊರೆಯುವ । ಮೃಡದಿಗೆ ॥೧॥ ದೇವರಮಾವನಿಭಾವವರಿತವರ । ಶ್ರೀವಸುದತಿಯರ। ನೀವುಮಣಿದು॥ ಹೀರದತಟ್ಟೆಯೊಳ್ । ಚಾರುಮುತ್ತುಗಳನುನೀರಯುರ್ವೆರಸುತ । ಶ್ರೀರತಿಗೆ ॥ ॥೨॥

### ನಿಶ್ಚಿತಾರ್ಥದಲ್ಲಿ ಹೇಳುವ ಹಾಡು.

ರಾಗ-ಸುರಟಿ-ತಾಳ-ಮಿಶ್ರಜಾತಿ.

(ನಳಿನಾಕ್ಷಿಯರೆ ಎಂಬಂತೆ.)

ವರನಿಶ್ಚಿತಾರ್ಥವಮಾಡಿದರುಶ್ರೀ । ವರರಮಾಮಣಿ



ಯರಿಗೆತಾವ್ ॥ಪ॥ ಸರಸಿಜಾಸನರಾಣಿಮೋದದಲಾ । ಸುರವಧೂಜನರೆಲ್ಲರು ॥ ಅ ॥ ಅಬಲಾಜನಂಗಳುಸಿಂಗರಿಸಿಕೊಂಡುಬುಜನೇತ್ರನನಿಕಟಗೆ ॥ ಸೊಬಗಿಂದಮಂಗಳದ್ರವ್ಯಗಳನು । ನಿಬಿಡಮಾಗ್ಯೆತರುತಲೆ ॥೧॥ ಕನಕಾಂಗಿಯರಕನಕಾಂಬರಗಳನುಕನಕಪಾತ್ರೆಯೊಳೊದವಿಸಿ। ಕನಕಗರ್ಭನಜನಕನಿದಿರೊಳುತವಕದಿಂತಂದಿರಿಸುತ ॥೨॥ ಚೂತಕದಳೀನಾರಿಕೇಳಪರೀತಫಲಸಂಘಾತದಿಂ । ಪೂತಪಾತ್ರೆಯೊಳಿರಿಸಿಮಂಗಳ । ವಾತೆರದಿಪೇಳುತ್ತಲೆ ॥೩॥

### ಗಂಡಿನವರ ಕಡೆ ಬಿಡಾರ ಬಿಡಿಸುವ ಹಾಡು.

ರಾಗ-ಕಾನಡ-ಏಕತಾಳ.

(ಮಂಜುಳವಾಗಿಹುದು ಎಂಬಂತೆ.)

ಬೀಗರಿವರಭೋಗವದೇನೊರೆವೆ ॥ಪ॥ ನಾವುಬಂದಿಳಿಯಲು । ತಾವುತೋರುವರಿಲ್ಲಿಕೇವಲವಚನವಲೆ ॥೧॥ ಮಾತಾಡಲುಗಿಣಿ । ಪೋತವಾವರುಯಿಲ್ಲಿ। ಕೂತುನುಡಿವವರಿಲ್ಲ ॥೨॥ ಕುದುರೆಯುಕಟ್ಟಲು । ಇದಿರೊಳುಮನೆಯಿಲ್ಲ ॥ ಸುದತಿಯರುಪಚರಿಸೆ ॥೩॥ ಪಟ್ಟೆಮಂಚಗಳಿಲ್ಲನೆಟ್ಟನೆತಲವಿಲ್ಲ । ಗಟ್ಟಿಗಾತಿಯರಿವರು ॥೪॥ ಈಮರಿಕತ್ತಲೊಳ್ । ದೀಪಗಳಿಲ್ಲವುಶ್ರೀಪತಿಬಲ್ಲನಿದನು ॥೫॥

### ಹೆಣ್ಣಿನಕಡೆ ಬಿಡಾರವ ಬಿಡಿಸಿದ ಹಾಡು.

ರಾಗ-ಶಹನ-ಆದಿತಾಳ.

(ಆಡಜನ್ಮಮು ಎಂಬಂತೆ.)

ಕೇಳಿರೆಬೀಗರೆ । ಲೀಲೆಯುಮೀಗಲೆ ॥ಪ॥ ಬೀಳುಮಾತುಗಳೆಲ್ಲ । ಕೇಳಲುತರವಲ್ಲ ॥ಅ॥ ತಾವುಬರಲುನಾವು । ನಾವುತೋರಿಸಿದೆವು । ಭಾವವರಿತುಕುಶಲವಕೇಳಿದೆವು ॥

ಯಕಮುನಿ ರಾಜಹೃದಯವಾಸನೆ ॥ ೧ ॥ ಮೇರುಶೈ
ಲಾಶುಗನೆ । ಪೂರಿತಸುರವಾಂಛಿತ । ಭೂರಧೂರಗಾಳಿ
ಚತಳ । ಢೀಶಚಾರುಭೂಷನೆ ॥ ॥೩॥

ಪಾರ್ವತೀದೇವಿಯನ್ನು ಹಾಸಿಗೆ ಕರೆಯುವ ಹಾಡು.

ರಾಗ-ನಾರಾಯಣಿ-ತಾಳ-ಮಿಶ್ರಜಾತಿ.

(ಮಹಿಷಾಸುರಮರ್ದಿನಿ ಎಂಬಂತೆ.)

ದಯಮಾಡಿಸುಹಾಸೆಗೆ । ಭವಾನಿ ॥ಪಲ್ಲ॥ ನಿಶಿಚರಾ
ವಳಿಯದವಿಭೇದನವಿನೋದಿನಿ । ಭಾಮಿ । ಮಾನಿನಿ । ಶ
ಶಿಮುಖೀಂದುಕಳಾವಿಭೂಷಿತ । ಲಸಿತಮಕುಟಾಲಂಕೃ
ತೆನುತೆ ॥೧॥ ಶಂಕರಾರ್ಧದೇಹಾಂಕಿತೆಮಾತೆ । ಪಂಕಜಾ
ಕ್ಷಸೋದರಿ । ಗೌರಿಪಂಕಿಲಾತ್ಮವಿನಾಶಿನಿ । ಸಮಸ್ತ
ಪಾಪನಿಷೂದಿನಿ । ಪಂಕಜಾಂಬಿಕೆದಾಕ್ಷಾಯಣಿ । ಸಂ
ಕಟಹಾರಿಣಿಜನನಿ॥ ॥೨॥

ಎಣ್ಣೆಶಾಸ್ತ್ರದಲ್ಲಿ ವರನಿಗೆ ಆರತಿ ಎತ್ತುವ ಹಾಡು.

ರಾಗ-ಸುರಟಿ-ತಾಳ-ಆದಿ.

(ಮುಟ್ಟುಮುಟ್ಟದಿರೆಲೊ ಎಂಬಂತೆ.)

ಆರತಿಯೆತ್ತಿರೆ । ನಾರಿಯರೆಲ್ಲರೂ । ಸಾರಸಸಮಮು
ಖ । ವಾರಿದಕಾಯಗೆ ॥ಪಲ್ಲ॥ ದಾಸಜನಾವನ । ಭಾಸು
ರಕಂಕಣ । ದೋಷವಿದೂರಗೆ । ಶೇಷಗಿರೀಶಗೆ ॥೧॥
ಇಂದಿರಾಮುಖದರ । ವಿಂದದಸೂರಗೆ।ನಂದನಕಂದಗಾ।
ನಂದದಕಂದಗೆ ॥೨॥ ಅಂಜನಗಿರಿಯೊಳು । ರಂಜಿಸುತಿ
ರುವಗೆ । ಕುಂಜಸಮಾಕ್ಷಗೆ । ಕಂಜಾಂಬಕಿಯರೆ ॥೩॥

ಅದೇಕಾಲದಲ್ಲಿ ವಧುವಿಗೆ ಆರತಿ ಎತ್ತುವ ಹಾಡು.



ರಾಗ-ಖರಹರಪ್ರಿಯ-ತಾಳ-ರೂಪಕ.

ಆರತಿಯನುಬೆಳಗಿರೆಸುಕುಮಾರಸಿರಿಗೆಸತಿಯರೆ ॥ಪ॥
ಸಾರಕರುಣಾಪೂರಿತಹೃದಯಾರವಿಂದವಯಾತೆಗೆ ॥ ಅನೀ
ಲದಾರಡಿಯೊಲುಪೊಳೆವ । ಲೋಲಕುಂತಲಾಳಿಗೆ ॥ ನಾ
ಳಿಕಾಭನೇತ್ರಿಗೆನಳಿ । ತೋಳ್ಗಳಿಂದನೀಲದ ॥೧॥ ಕ್ಷೀರ
ವಾರಿರಾಶಿಸುತೆಗೆ । ಚಾರುಸುಗುಣಪೂತೆಗೆ । ಮಾರಜ
ನನೀಮೋಹನಾಂಗಿ । ನಾರಿಗೆನವಹೀರದ ॥೨॥ ಬಾಲಸು
ಧಾಕರನನೆಸಲೊ । ಳಾಲಿಗಿಸಿಹಬಾಲೆಗೆ ॥ ಶೀಲವತಿಯ
ರೆಲ್ಲಸಿರಿಗೆ । ಲೋಲಮರಕತಂಗಳ ॥ ॥೩॥

ಎಣ್ಣೆಶಾಸ್ತ್ರದಲ್ಲಿ ವರನಿಗೆ ಆಶೀರ್ವಾದ ಮಾಡುವ ಹಾಡು

ರಾಗ-ಬಿಲಹರಿ-ಮಿಶ್ರಜಾತಾಳ.

(ಪಾಲಿಸು ಸಂತತ ಎಂಬಂತೆ.)

ಸುಖಿಯಾಗಿರುಸಂತತಂ । ನಿಖಿಲಾತ್ಮನಾಯಕ ॥ಪ॥
ವೇದವೇಧಾಂತಗಳನೋದುತಮೋದದಿ । ಭೇದವಾದದಿ
ಆದರಿಸದೆಯಭೇದದೊಳುಜಗ । ದಾದಿಕಾರಣವನ್ನುತಿ
ಳಿಯುತ ॥೧॥ ಶೀಲವತಿಯಾತರುವಬಾಲೆಯವರಿಸುತ।ಆ
ದರಿಸುತ । ಬಾಲರನುಪಡೆಯುತಲೆಲಾಲನ । ಲೋಲನಾ
ಗುತಸುಗುಣಿಯೆವಿನುತ ॥೨॥ ತಂದೆತಾಯ್ಗಳನೆರಗಿಮೋ
ದದಿ । ಸೇವಿಸಿ । ಸಂಭಾವಿಶಿಕುಂದದಾನಂದವನುಪೊಂ
ದುತೆ । ಕಂದನೀನಿಲ್ಲಂದದಿಂದಿರು ॥ ॥೩॥

ಇದೇಕಾಲದಲ್ಲಿ ವಧುವಿಗೆ ಆಶೀರ್ವಾದ ಮಾಡುವಹಾಡು

ರಾಗ-ಕಮಾಚು-ಆದಿತಾಳ.

(ಸಾರಸಸಮುಖ ಪರಮಮ ಎಂಬಂತೆ.)

ನೀಸುಖಿಯಾಗುಜನಕತನಯೆ । ವನಜಾಸನವಿನುತೆ

ಯೆ ॥ಪಲ್ಲ॥ ಶ್ರೀತಪ್ರೊಂದೆಗಿರೀಶವಂದ್ಯಪದ । ದಾಸರ
ಪೋಷಿಸುಹೇಶುಭದಾಯಕಿ ॥ಅ-ಪ॥ ಸತಿಯೆಪತಿವ್ರತೆ
ತತಿಯೊಳಗತಿಶಯಪಡದು ॥ ಕ್ಷಮೆಯೊಳ್ । ಕ್ಷಿತಿಯ
ನ್ನಿಳಿವಮತಿಯೊಳಗಾಭಾರತಿಪ್ರೊಲ್ದು ॥ ಸುತರಪಡೆದುನೀ
ನತಿಹಿತದಿಂದಲೆಸುತೆಮಿತಿಮಿರಿದವೈಭವವರಿಯುತ ॥೧॥
ಸಿರಿಯೊಳುಸುರಪನತರುಣಿಯುಜರೆಯುತ ॥ ರಮಣಿಸು
ಮಣಿ । ನೆರಕಾವಮಾವಿಸುಖಂಗಳವೈಭವಪೊಂದಿ । ಶರ
ಣಾಗತಪೊರೆಯುತಂದದೊಳಾ । ಚಿರಕಾಲದೊಳಾವಾ
ಸಿಸುಭೂಶಿಸು ॥೨॥ ಪತಿಸೇವೆಯೊಳಾಮನಸೂಯೆಯು
ನೀನೆನಿಶಿವಮದಿಳಿ । ವ್ರತದೊಳುನಾಳಾಯನಿಯಂತತಿಕೆ
ಯಪೊಂದಿ । ವಿತತಸೌಖ್ಯಗಳನನುಭವಿಸುತಂ । ತತ
ಮಿಳಿಯೊಳುಭಾರತಿಸುತೆವಂತೆ ॥ ॥೩॥

ಎಣ್ಣೆ ಒತ್ತುವಾಗ ಹೇಳುವ ಹಾಡು.

ರಾಗ-ತಾಳ.

(ಅಂಗನೆರೋಕಾಂತುಡ ಎಂಬಂತೆ.)

ಮಂಗಳಗಾತ್ರನಭ್ಯಂಗದೊಳಾಗಲೆ । ಮಂಗಳವಾಗ
ಲೆಪೇಳದರು ॥ಪ॥ ರನ್ನದಪೀಠ । ವನ್ನಿರಿಸುತಲೆಚೆನ್ನದ
ಹಾಸಿಗೆಹಾಸಿಸುತಲೆ।ಕನ್ನೆಯುರತಗೆ । ಸನ್ನೆಯೊಳ್ಗೈ
ದಿ ॥೧॥ ನಲ್ಲೆಯಾಗಪುಲ್ಲಿಸುಮಂಗ । ಳತಯೆತ್ತೈಲವಶೇ
ರಿಸುತ । ಸನಲಿತಾಕ್ಷಗೆ । ಚಲ್ಲಿದರಾಗ ॥೨॥ ಬಾಲೆಯು
ರೆಂಡು । ವೀಳೆಯತಂದು । ಶ್ರೀಲಲನಾಮಣಿಲೋಲನಿ
ಗೆ ॥ ಲೀಲೆಯೊಳರ್ಪಿಸಿ । ತೈಲವನಿರಿಸಿ ॥೩॥ ಮುತ್ತುಗ
ಳಿಂದಕೆತ್ತಿದತಟ್ಟೆಯೊಳು ॥ ದುತ್ತಮಹಾರತಿಯೆತ್ತುತ
ಲೆನೆತ್ತಿಯೊಳೆಣ್ಣೆಯ । ನೊತ್ತುತಲಾ ॥ ॥೧॥



ಎಣ್ಣೆ ಒತ್ತುವಾಗ ವಧುವಿಗೆ ಹೇಳುವ ಹಾಡು.

ನಾಯಕಿ-ರಾಗ-ಮಿಶ್ರಜಾತಿ.

ಡಾವುಬೋದವನಾಡು ಎಂಬಂತೆ.

ಅಂಗನೆಯರುತಾವ । ಭ್ಯಂಗವಮಾಡಿದರು । ಮಂಗ
ಳಾಂಗಿಗೆ । ಸರ್ವಮಂಗಳೆಗಾಗ ॥ಪ॥ ಶ್ರೀರಮಣೀಮ
ಣಿ । ನೀರೆಯರಾಗ । ಹೀರದಪೀಠದಿ । ರಾರಾಜಿಪಳಿಗೆ॥
ಅನುಪಲ್ಲವಿ॥ ಬಾಲಮೃಗಾಕ್ಷಿಗೆ । ವೀಳೆಯನೀಡಿ । ನಾ
ಳಿಕಕರಗಳಂ । ಮೂಲತಿತೈಲದಿಂ ॥ ೧ ॥ ಶೈಲಬಾಲೆಯ
ಮೃದು । ಪಾಲದೊಳಿರಿಸ । ಬಾಲೆಯರಾಗಲೆ । ಲೀಲೆ
ಯೊಳೊತ್ತಿ ॥೨॥ ಮುತ್ತೈದೆಯರುತಾವು । ಮುತ್ತಿನಾ
ರತಿಯುಂಎತ್ತುತಸಂಪಿಗೆ । ಯುತ್ತಮತೈಲದಿ ॥

ದಂಪತಿಗಳಿಗೆ ಎಣ್ಣೆ ಒತ್ತುವಾಗ ಹೇಳುವ ಹಾಡು.

ರಾಗ-ಪಂತುವರಾಳಿ-ತಾಳ-ರೂಪಕ.

(ನಾರಾಯಣನಿಗಮವಿನುತ ಎಂಬಂತೆ.)

ನಾಗೀಶಸತಿಯನಮಿಸಿ । ನಾಗಾಸ್ಯವನ್ನುಭಜಿಸಿ ॥ಪ
ಶ್ರೀಗೋಪಬಾಲಸಿರಿಯ । ರಾಗಾಭ್ಯಂಗವಮಾಳ್ಪ ॥ಅ
ನುಪಲ್ಲ॥ ಗಾಡಿಕಾತಿಯರವರ । ಕೂಡಿಸಿಮಣೆಯಮೇಲೆ
ನೀಡುತವೀಳೆಯವನು । ಹಾಡು[illegible]ಪಾಡಿದರು॥೧॥ ಬಾ
ಲೆಯರಕ್ಷತೆಗಳ । ಶ್ರೀಲೋಲಸಿರಿಯರ ।ಮಾಳಿಯಮೇ
ಲೆಹಾಕಿ । ನೀಲದಾರತಿಯೆತ್ತಿ ॥೨॥ ಕೆಂಪಾಗಕಿಯರು ।
ಸಂಪಿಗೆತೈಲದಿಂದ ॥ ದಂಪತಿಗಳಿಗೆಬೇಗ । ಯಿಂಪಾಗಿ
ಪೊತ್ತಿದರು ॥೩॥ ಶ್ರೀಲೋಲರುಕ್ಮಿಣಿಯರ । ತೈಲಾ
ಭ್ಯಂಗವಮಾಡಿ । ನೀಲಾಲಕಾಳಸತಿಯು । ರಾಲೋಲನ
ಭಜಿಸುತಿರ್ದರು ॥

## ಗಂಡಿಗೆ ನೀರೆರೆಯುವ ಹಾಡು.

ರಾಗ-ಜಂಜೂಟಿ-ತಾಳ-ಮಿಶ್ರಜಾತಿ.

(ವನದೇವಿಪಾಲಿಸುವೈದೇಹಿಯು ಎಂಬಂತೆ.)

ಮರೆನೀರತುಂಬಿಮೆರಾಗನಾರಿಯರು ॥ ವನಿತಾಮಣಿ
ಗುಣಾಲೋಲರು॥ಪ॥ ಈರೈದುಕಲಶದಿ । ನೀರನುತುಂಬು
ತಚಾರುಪೂಮಾಲೆಯಿಂ ।ಪೂಜಿಸಿ ॥ಅ॥ ಆರತಿಬೆಳಗುತ ।
ನಾರಿಯರೈವರು । ಮಾರಸುಂದರಸುಕುಮಾರಗೆ ॥೧॥ ರ
ನ್ನದಹಂಡೆಯೊಳ್ । ಪನ್ನೀರುಗಂಧವ । ನನ್ನಿಯಿಂ
ತುಂತಕಾಸುತ ॥೨॥ ರತುನತಂಬಿಗೆಯೊಳು । ಸತಿಯು
ರುತುಂಬುತ । ವಿತತದಯಾಕರರಾಮಗೆ ॥ ॥೩॥

## ಎದಿರುಗೊಳ್ಳುವಾಗ ವರನನ್ನ ಹಾಸೆಗೆ ಕರಿಯುವ ಹಾಡು.

ರಾಗ-ಕಮಾಚು-ತಾಳ-ರೂಪಕ.

(ಇಂದುತವಪದಾರವಿಂದಕೆ, ಎಂಬಂತೆ)

ಹಾಸಗೆದಯಮಾಡೊಸುಂದರ । ನುತಮಂದಾರ ॥ಪ
ಕಮಲನೇತ್ರ । ವಿಮಲಗಾತ್ರ । ಶಮದಮಾದಿಸಂಯು
ತ । ಕೋಮಲಮೃದುಪಾದಯುಗಳ । ಕಾಮಜನಕ
ಶಾಮಲಾಂಗ ॥೧॥ ಭಾಸುರಭೂಷಾಳಿರಮ್ಯ । ಶ್ರೀಶರ
ಘುರಮಣದೇವ । ವಾಸುದೇವಕಾಶಮಾನ । ಭೂಸು
ರಾಳಿಪಾಶಮೋಚಕ ॥೨॥ ಸುಂದರಾರವಿಂದಪಾದ । ನಂ
ದಿತಾಮರಾಳಿಯು । ಕುಂದರದನ ॥ ಚಂದಿರಾಸ್ಯ । ಮಂ
ದಹಾಸಭಾಷಿತನುತ ॥



ರಾಗ-ಕಮಾಚ್-ತಾಳಮಿಶ್ರಜಾತಿ.

(ರಾಜಿಪವನ ರಾಜಿರಾಜಾನನೆ ಎಂಬಂತೆ.)

ವರಪೂಜೆಮಾಡಿದನು । ರಾಜನು ॥ಪ॥ ಪದುಮನಾ
ಭನಸಂ । ನಿಧಿಯೊಳುಕೂಡುತ ॥ ಸುದತಿಯೊಡನೆಮೋ
ದದಿಕೂಡುತ ॥೧॥ ಲಲನೆಯುಕಲಶದ । ಜಲವನುಹಾಕ
ಲು । ಜಲರುಹಾಂಬಕಪದ । ನಳಿನದೆರದು ॥ ೨ ॥ ಮೆರೆ
ರೆಯುವ । ಪೀತಾಂಬರ । ಸಮರ್ಪಿಸಿ । ಪರಿಮಳಗಂಧ
ವ । ನೆರೆಪೂಸುತ ॥೩॥ ಕರಯುಗಳಕೆದಿವ್ಯಾ । ಭರಣ
ವತೊಡಿಸುತ । ಪರಿಪೂಜಿಸಿರಘುವರಚರಣವ ॥೪॥ ಬಾ
ಡಬಾರಾಜ್ಞೆಯು । ಬೇಡುತಸತಿಯೊ । ಗೂಡಿಸಂಕಲ್ಪ
ವ । ಮಾಡುತಾಗ ॥ ॥೪॥

## ವರನಿಗೆ ಆರತಿ ಎತ್ತುವಹಾಡು.

ರಾಗ-ಕಮಾಚು-ಆದಿತಾಳ.

(ನೀರೇಜಲೋಚನೆ ಎಂಬಂತೆ.)

ನೀರೆಯಾರೆತ್ತಿರೆ । ಆರತಿಯಾನೆರೆ ॥ಪಲ್ಲ॥ ಶಾರದೇಂ
ದುಮಂದಹಾಸ । ಚಾರುವದನಗೆ । ವಾರಿಜಾಭಸುಂದರ
ಸುಕುಮಾಕಾಯಗೆ ॥ ೧ ॥ ಭೂಮಿಭಾರವನ್ನುನೀಗಿ ।
ಕ್ಷೇಮಮಾಡಲು । ಭೂಮಿಯೊಳಗೆಯುದಿಸಿದವಗೆ। ಈ
ಮಹಾತ್ಮಗೆ ॥೨॥ ಪಾಪಿಗಳಗೆತೋರದಿರ್ಪ । ರೂಪವಂ
ತಗೆ ॥ ತಾಪಸಾಳಿವೇದ್ಯಗೆ । ಚಿದ್ರೂಪಧಾರಿಗೆ॥೩॥ ವಂ
ದನಾಗತಾಮರಾಳಿ । ವಂದಿತಾಂಘ್ರಿಗೆ । ಸುಂದರಾರವಿಂ
ದಪದಗೆ । ಕುಂದರದನಗೆ ॥ ॥೪॥

## ವರನಿಗೆ ಆಶೀರ್ವಾದಮಾಡುವ ಹಾಡು.

ರಾಗ-ಸಾವೇರಿ-ತಾಳಮಿಶ್ರಜಾತಿ.

ದೇವವಿಜಯತಾಂವಿಜಯತಾಂವಿಜಯತಾಂ ॥ಪ ಲ
ಲನಾಮಣಿಬಾಲಕಿಯೆನ್ನು ವಲಿಯುತ್ತಲೆ ಮೋದದೊಳ
ನ್ನು । ಸಲೆಕಾಮಾದಿ ಸೌಖ್ಯಗಳನ್ನು ಜಲಜಾಕ್ಷನೆಪೊಂ
ದುವದಿನ್ನು ॥೧॥ ಸುರರಾಜಶಿರೋಮಣಿರುಚಿಯಿಂಚರ
ಣಂಗಳುರಾಜಿಸಲನಿಶಂ । ರಮಾಯು ಷ್ಯವನುಪೊಂದಿಧ
ರೆಯೋಳ್ । ಚಿರಕಾಲದಿಬಾಳುನೀಸುಖದೋಳ್ ॥ಕ
ರುಣಾಕರಪೋಷಿಸಿಜಗವಂ । ವರದಾಭಯಕನೆನಿಪ
ರಮಾತ್ಮನೆಮುರಮದಮಥನ। ಶರಣಾಗತಪಾಲಕನೆನಿರೆ॥

## ಕನ್ಯೆಯು ಗೌರೀಪೂಜೆಮಾಡುವಾಗ ಹೇಳುವಹಾಡು.

ರಾಗ-ಜಂಜೂಟಿ-ರೂಪಕತಾಳ.

(ರಾಮನೇ ರಘುಕುಲಾಬ್ಧಿ ಎಂಬಂತೆ.)

ಪೂಜಿಪೆನುಪೂಗಳಿಂದ । ಪೂರ್ಣಚಂದ್ರಮೌಳಿಯೆ॥
ಪ॥ ರಾಜರಾಜಸಖನರಾಣಿ। ರಾಜೀವಾಂಬಿಕೆಶಿವೆ॥ಅನು॥
ಮಲ್ಲಿಕಾದಿಪೂಗಳಿಂದ । ಸಲ್ಲಲಿತಗಂಧದಿಂ । ಫುಲ್ಲಸಾತ
ಸಾಕ್ಷಿನಿನ್ನ । ಪಲ್ಲವಾಧರಿಮುನ್ನ ॥೧॥ ಷೋಡಶೋಪ।
ಚಾರಗಳನು । ಮಾಡಿಭಕ್ತಿಯಿಂ । ಶಿವೆ । ಜೋಡಿಸೆನ್ನ
ಕೈಗಳನ್ನು । ಬೇಡುತಿರ್ಪೆನಿನ್ನ ॥ ೨ ॥ ಕಾಂತನನ್ನು
ದೀರ್ಘಜೀವ । ವಂತನಾಗಿಬಾಳುಪೋಲ್ । ಸಂತಸದಿ
ವರವನೀಡು । ಕುಂತಲಾಳಭಾಸುರೆ ॥ ॥೩॥



## ಗೌರೀದೇವಿಯನ್ನು ಸ್ತುತಿಮಾಡುವ ಹಾಡು.

ರಾಗ-ಬೆಗಡೆ-ಆದಿತಾಳ.

(ತನವಾರಿತನಮುಲೇದಾ ಎಂಬಂತೆ.)

ಪಾಹಿಶಂಕರಿ । ಸುಖಂಕರಿ । ಕಂಬುಕಂಧರಿ । ಕೃ
ಪಾಕರಿ ॥ಪಲ್ಲ॥ ಶೈಲರಾಜಬಾಲೆ । ಬಾಲಚಂದ್ರಫಾಲೆ ।
ಫಾಲನೇತ್ರಲೋಲೆ । ಲೋಲಕುಂತಲಾಳೆ ॥೧॥ ಶ್ರೀ
ಮಹಾಬಲಾದಿ । ಶೈಲವಾಸಿನೀಯೆ । ಶಾಮಲಾಂಬಿಕಾ
ಯೆ । ಧೀಮಫಾಲಜಾಯೆ ॥೨॥ ಇಂದಿರಾಮುಖಾರ ।
ವಿಂದಸಾರಶೂರ । ವಂದಿತಾಂಘ್ರಿಮಾತೆ । ವಂದಿಪೇನುಪ್ರೀ
ತೆ ॥೩॥ ಇಂದಿರಾದಿದೇವ । ಸುಂದರೀಪರೀತೆ । ಮಂದ
ಹಾಸಿನಿಗೋ । ವಿಂದಸೋದರಿಯೆ॥ ॥೪॥

## ಕಾಶೀಯಾತ್ರೆಹಾಡು.

ರಾಗ-ಬೇಹಾಗ್-ಆದಿತಾಳ.

(ನೀಲಬಲಾಹಕ ಎಂಬಂತೆ)

ಶ್ರೀಶನು ಕಾಶಿಯುಯಾತ್ರೆಗೆ । ವಾಸವಾದಿಗಳೆಲ್ಲಭೂ
ಷಿಸಲು ॥ಪ॥ ಸ್ನಾತಕವ್ರತಗಳನಾತೆರಮಾಡಿ । ಪೂತನು
ಸುರವರವ್ರಾತದೊಳು ॥೧॥ ದೇವಪುರೋಹಿತಜೀವ
ರಾಸಿನಿಯು । ದೇವಗೆಮುಕುಟವಪಾವರಿಸೆ। ಫಾಲದಿಂಕುಂ
ಕುಮ । ಪಾಲಿಸಿಕಿವಿಯೋಳ್ । ನೀಲಕುಂಡಲಗಳಭೂ
ಷಿಸುತ ॥೨॥ ಹೇಮಪಿತಾಂಬರನೆಂಮದಿಧರಿಸಿ । ಕಾ
ಮನೀಯ್ಯಕಪಟವಾದಳಿಸಿ ॥೩॥ ಮಾಲತೀಸುಮಗಳ ।
ಮಾಲೆಯುಗಳದಿ । ಲೋಲನುಧರಿಸುತಲೀಲೆಯೊಳು ॥೪॥
ಕಾಲಿಗೆಕಡಗಕಂ । ಕಣಗಳನಿಟ್ಟು । ನೀಲದಪಾದುಕಗ
ಳಕೊಟ್ಟು ॥೫॥ ಬೀಸಣಿಗೆಯನುಭೂಷಿಸಿಕರದಿ । ಭಾಸಿ

ಪದಾಂಬುಜವನಾಸರಸಿ ||೬|| ಗೋಧುವೆಮೊದಲಾಧಾನ್ಯಗ
ಳಂ | ಶ್ರೀಧರಧರಿಸುತಲಾದರದಿ ||೭|| ವಾಲಗಭೇರಿತಾ
ಳಮೃದಂಗ | ಘಾಳಿಯುಕೋಲಾಹಲವೆಮಾಡೆ ||೮||
ಬಾಡಬರ್ವೇದವ | ಪಾಡಲುಬೇಗ | ಬೇಡುಪಸರ್ಗಭ
ಯವ | ನೀಡುತಲಾರ || ||೯||

ಕನ್ಯಾದಾನವನ್ನು ಮಾಡುವಾಗ ಹೇಳುವಹಾಡು.

ರಾಗ-ಬೇಗಡ-ತಾಳಮಿಶ್ರಜಾತಿ.

(ಏನಮಾಡಿದೆ ಎಂಬಂತೆ.)

ಕನ್ಯಾದಾನವನು | ಮಾನ್ಯನುಗೈದನು |ಮಾನ್ಯರನು
ಜ್ಞೆಯೊಳು ||ಪ|| ಗೋರೋಚಜಿನ || ಸಾಲಕಸ್ತೂ
ರ್ಯಾದಿ | ಸಾರಗಂಧವಪೂಸಿ | ಶ್ರೀರಮಣರಿಗೆ ||೧||ಭೂ
ಸುರಮಾಗಿಹ || ಕೌಸುಮಹಾರವ | ಶ್ರೀಶನಕೊರಳಿಗೆ
ಆಸೆಮುದಿಹಾಕಿ || ಮಂಗಳಕರವಾದ || ಮಂಗಳಾಭಿ
ಷೇಕಗಳ | ಸಂಕೀಕರಿಸುತ | ಮಂಗಳಶೀಲಗೆ ||೨||
ಭೇರಿಮೃದಂಗವು | ಭೋರೆಂದುಮೊರೆಯಲು | ನೀರ
ಜನೇತ್ರಿಯು | ನಾರಘುರಾಮಗೆ ||೩|| ವರವಧೂವರರ
ನು | ಸಿರಿಹರಿಯರೊಲಾಗ | ಹರುಷದಿಭಾವಿಸಿ | ಪರಿಷ
ರಿಮೋದದಿ || ||೪||

ಕನ್ಯಾದಾನ ಮಾಡಿದ ಮೇಲೆ ಹೇಳುವ ಹಾಡು.

ರಾಗ-ಮೋಹನ-ಮಿಶ್ರಜಾತಿ-ತಾಳ.

(ಯಾರಿಗೆನಾನುಮಾಡಿ ಎಂಬಂತೆ.)

ಕನ್ಯಾದಾನವಮಾಡಿ | ಧನ್ಯನಾದಮತಾನು | ಮಾನ್ಯ
ರೊಳಗಗ್ರ | ಗಣ್ಯನೆನಿಸಿದನು ||ಪ|| ಮೂಲಪಿತೃಗಳೆ
ಲ್ಲ | ಮೇಲಾದಸದ್ಗತಿ | ಬಾಳಲೋಸುಗಯಿಾ | ಬಾಳೆ



ಯನಿತ್ತನು ||೧|| ಪತ್ತುದಾನಗಳ || ದ್ವಿಜೋತ್ತಮರಿ
ಗೆಮಾಡಿ | ಉತ್ತಮಗುಣನಾ | ನಿತ್ಯಕಲ್ಯಾಣಗೆ ||೨||
ಧರೆಯೊಳುಸುಖಗಳ | ಕರಿಯುತಬಳಿಕಲೆಭರದಿಕೈವ
ಲ್ಯವ | ನೆರಗಿಪತರವಾದ ||೩|| ದಾನದೊಳುತ್ತಮ |
ದಾನವೆಂದರಿಯು | ಶ್ರೀನಿವಾಸನಿಗೆಮಾನಿತನಾಗಲೆ||೪||

ಅರುಂಧತಿಯನ್ನು ಪೂಜಿಸುವ ಹಾಡು.

ರಾಗ-ಕಮಾಜು-ರೂಪಕತಾಳ.

(ಇಂದುತಪವಪದಾರವಿಂದಕೆ ಎಂಬಂತೆ.)

ಪೂಜಿಸಿದಳರುಂಧತಿಯನಾಸರೋಜಮುಖಿ ||ಪಲ್ಲ||
ರಾಜಮುಖಿಯರಂಗಳದೊಳು || ರಾಜವದನೆಯೊಡನೆ
ಕೂಡಿ | ಸಾಜದಿಂದರುಂಧತಿಯು | ರಾಜಮಾನತಾರೆತೋ
ರೆ ||೧|| ಮನಡಬಯಕೆಗಳನುಬಯಸಿ | ವನಜನೇತ್ರಿ
ಯಾಗಳು | ಘನಸುಮಂಗಳಗಳಿಂದ | ಮನವನಾಗಡ
ಣಿಯಿಸುತಲೆ || ಷೋಡಶೋಪಚಾರಗಳನು | ಮಾಡಿ
ಮನದೊಳು | ಗಾಢಭಕ್ತಿಯಿಂದಕೂಡಿ | ಬೇಡಿಮ
ನೋಜೇಪ್ಸಿತವನು || ||೨||

ಔಪಾಸನೆ ಮಾಡುವ ಹಾಡು.

ರಾಗ-ನಾಯಕಿ-ಮಿಶ್ರಜಾತಿ-ತಾಳ.

(ಶೀತಕಿರಣ ಎಂಬಂತೆ.)

ಶ್ರೀವಧೂವರರುಗಳು | ತಾವವಪಾಸನೆ | ಸಾವಧಾನದಿ
ಗೈದರು ||ಪ|| ಯಿದಿರೊಳ್‌ಪುರೋಹಿತರೋದಗಿಮಂ
ತ್ರಪಠಿಸೆ | ಪದುಮನಾಭನುತನ್ನಸುದತಿಯಿಂದೊಡ
ಗೂಡಿ||೧||ಪುಂಡರೀಕಾಕ್ಷಿಯು|ತಂಡುಲವಕದಕೆ|ರಂಧ
ದಿಂನೀಡುತಿರೆ|ಶುಂಡಾಲವರದನು||೨||ಸಾಕ್ಷಿಯಿಲ್ಲದೊಳಿ

ರ್ವೆ। ನೀಟುಗಾರರುಕಡೆ। ನೋಟದಿನೋಡುತಲೆ । ನೀಟಿ
ನಿಂದಿರ್ಪರು।। ಪಕ್ಷಿವಾಹನುತಾನು। ರಕ್ಷೆಯಧರಿಸುತ । ಲ
ಕ್ಷ್ಮೀಯಭ್ರೂಮಧ್ಯಕೆ । ರಕ್ಷೆಯನಿಡುತಲೆ ।।೪।।

ರಾಗ-ಕುರಂಜಿ-ರೂಪಕತಾಳ.

(ಶ್ರೀವೇಣುಗೋಪಾಲ ಎಂಬಂತೆ.)

ಜಯವೇಣುಗೋಪಾಲ । ಜಯವಾರಿದನೀಲ । ಜ
ಯರನ್ನನೀಹಸೆಗೆ। ದಯಮಾಡಿಸೆಂದರುಸತಿಯರು।।ಪ।।
ದೈತೇಯಕುಲಮದವನಾತೆರದಿಸಂಹರಿಸಿ । ಭೂತಲದ
ಭಾರವಂ । ನೀತೆಗೆದೆಯ । ಯಾತೆರದೊಳು।।೧।। ಲೋ
ಕಾಹಿತವಮಾಳ್ಪಮೂಕಾಸುರನಕೊಂದ । ರಾಕೇಂದು
ಮುಖಹೇಮನಿಹಾಸೆಗೆ । ಬಾರೆಂದರು ।।೧।। ಗೋಪಾ
ಲಕುಲಮೌಳಿ । ಶ್ರೀಪಾಲನುಜಾಳಿ । ಪಾಪಾಟವೀನಿಕ
ರ । ದೀಪಾಕರ । ಬಾರೆಂದು ।। ।।೩।।

ಅದೇಕಾಲದಲ್ಲಿ ವಧುವನ್ನು ಹಾಸೆಗೆ ಕರಿಯುವ ಹಾಡು.

ರಾಗ-ಶಂಕರಾಭರಣ-ತಾಳರೂಪಕ.

(ಮುದ್ದುಲಪೆಂಡ್ಲಿ ಎಂಬಂತೆ.)

ಶ್ರೀರಮಣಿಯುಬೇಡಿದರು । ಹೀರದಹಸೆಗೆ।।ಪ।। ಚಾ
ರುಭೂಷಣವಿಶ್ರಿಂ । ಗಾರಮಾಡುತ । ಮಾರಸುಂದರ
ಸುಕುಮಾರನೀರೆಯರಾಗ ।।೧।। ರನ್ನಪೀತಾಂಬರ । ಪ
ನ್ನಗವೇಣಿಯರ್ । ನನ್ನಿಯಿಂಹಾಸುತ । ಚನ್ನೆಯೆಹಾ
ರೈಶಿ ।।೨।। ಬಾಲೆಯರೆಲ್ಲರು । ಲೋಲಾಗಿಹಾಡನು । ಹೇ
ಳುಕಳೀಲೆಯೋಳ್ । ಕೋಲಾಹಲಮಾಡೆ ।।೩।। ಮು



ತ್ತೈದೆರೆಲ್ಲರು । ಸುತ್ತಲುಕೂಡುತ । ಮತ್ತಕಾಶಿನೀ ।
ಸರ್ವೋತ್ತಮಳಾಗಿಹ ।।

ರಾಮರ ಪರವಾದ ಉರಟಣೆಹಾಡು.

ರಾಗ-ಶಂಕರಾಭರಣ-ಆದಿತಾಳ.

(ಶ್ರೀರಾಮಜಯಜಾಯ ಎಂಬಂತೆ)

ಶ್ರೀನಾಗಾನನನಮಿಸಿ । ವಾಣೀದೇವಿಯಭಜಿಸಿ । ಜಾ
ನಕಿರಾಮರಮದುವೆ । ಯುರಟಣೆಯಪೇಳ್ವೆ ।।೧।। ಸುದ
ತಿಯರೆಲ್ಲರುಕೂಡಿ । ಮುದದೊಳುಮಂಗಳದ್ರವ್ಯ । ಪೊ
ದಗಿಸುತಾದರಿಶಿದರಾ । ಮದುವೆಯಸೌಧದೊಳು ।।೨।।
ಮಾಣಿಕಪೀಠವನಾಗ । ವೇಣಿಯರಹಾಕುತಲೆ । ಚೀ
ನಾಂಬರವಹಾಸಿ । ಮಾನಸದಿಮುದದಿ ।।೩।। ನಿರುಪಮ
ಸಿಂಗರದಿಂದ । ಮೆರವವಧೂವರರನ್ನು । ವರರತುನಹಾ
ಸೆಯೊಳು । ಕರದುಕುಳ್ಳಿರಿಸಿ ।।೪।। ವಾಣೀಂದ್ರಾಣಿ
ಯುಮೊದಲಾ । ವಸನಿಸಿಯರಿದಿರ್ದೈದಿ । ಜಾನಕಿಗೆಪೇ
ಳಿದರಾ । ಖೇಲನಕೌಶಲವಂ ।।೫।। ಸೀತೆಯುರಾಘವನಿ
ದಿರೊ । ಳೈತಂದುನಿಲ್ಲುತಲಿ । ಶೀತಲಮಾದಾಕರದೊಳ್
ರಶಿವನಪಿಡಿದು ।।೬।। ಮರಕತಕಾಂತಿಗಳಿಂದ । ಸ್ಫುರಿ
ತಕಪೋಲವತೋರ್ಯೆ ।। ಕರದೊಳುನಾಪಿಡಿದಿರುವ । ಅ
ರುಶಿನಪ್ರಸುವೆನು ।।೭।। ಅಭಯವನೀಡುವಕರವಂ । ವಿ
ಬುದರಾಜಿತಪದವಂ । ಉಭಯವನ್ನುಂದಯಮಾಡ್ಯೆ ।
ಅರಿಸಿನಹಚ್ಚುವೆನು ।।೮।। ಬಾಲಚಂದ್ರನಪೋಲ್ವ ।
ಫಾಲವನುದಯಮಾಡ್ಯೆ । ಲಾಲಿಸುನಾಕುಂಕುಮ
ವಂ । ಲೋಲನೆಹಚ್ಚುವೆನು ।।೯।। ದಿವ್ಯಕಂಠವತೋ
ರ್ಯೆ । ನವ್ಯಗಂಧವಪೊಳವೆ । ಭವ್ಯಪ್ರಮಾಲೆಯನ ।

ಸೇಸ್ಯನೆಹಾಕುವೆನು ||೧೦|| ಈಪರಿಯಾದಾಜನಕೆ|ಭೂಪಸುತಾರಾಘವರ | ಪಾಪನಿವಾರಕವಾಸ | ಲ್ಲಾಪವ್ರ ಪಾಲಿಸಲಿ || ||೧೧||

### ಕೃಷ್ಣನ ಪರವಾದ ಉರಟಣೆ ಹಾಡು.

ರಾಗ-ಬೇಹಾಗ್-ಏಕತಾಳ.

(ಯಾರನೇನ್ನಬಾರದೆ ಎಂಬಂತೆ.)

ಕೋಮಲಾಕಾರಸುಂದರ|ಶಾಮಶರೀರ ||ಪ|| ನೀಲರತ್ನರೋಚಿಯಿಂ|ಲೋಲವಾದನಿನ್ನ ಕ | ಪೋಲಕರಶಿನವನ್ನು ಪಾಲನೆಪೂಸುವೆನುನಾನು ||೧|| ನನ್ನೆಯಿಂದಗೋಪಿಕಾ | ಕನ್ನೆಯರ್ದುರ್ಕೂಲವ | ಸನ್ನೆಯಿಂದೆಳದಕರಗಳನ್ನು ಪೂಸುವೆನುನಾನು ||೨|| ಪತ್ತುನಾಲ್ಕು ಲೋಕವ| ಪೊತ್ತಿರಿಸನತಾಪರಿಸತ್ತಮನೆ | ನಿನ್ನಡಿಯುಬಿತ್ತರದಿಪೂಜಿಸುವೆನು || ಬಾಲಚಂದ್ರನಂದವು | ಬೀಳುಗ್ಯೆವದಿನ್ನಯಫಾಲದಿಕುಂಕುಮವನು | ಲೋಲನೆರಚಿಸುವೆನು || ಶಂಬರಾರಿಸುಂದರ | ಬಿಂಬಸನ್ನಿಭಾಧರ | ಕಂಬುಗಳಕೆಗಂಧವ | ನಂಬಿನಿಂದಪೂಸುವೆನು ||೪|| ಮಾಲತೀಸುಮಲ್ಲಿಕಾ | ಪಾಳಿಯಿಂದರಾಜಿಪ | ಮಾಲೆಯನ್ನುಹಾಕುವೆನು | ನೀಲವಾರಿದಾಭನೆ || ||೬||

### ಪಾರ್ವತೀ ಪರವಾದ ಉರಟಣೆಹಾಡು.

ರಾಗ-ಅಠಾಣ-ರೂಪಕತಾಳ.

(ಯುವತಿತಾಳೆನಮ್ಮ ಎಂಬಂತೆ.)

ಶೈಲಾಧಿಪಬಾಲಿಕೆ | ಶೃಂಗಾರ | ಕೈಲಾಸಕುಲನಾಯಿಕೆ || ಕಂದರ್ಪಸಾಯಕೆ ||ಪ|| ಮುಕುರಂಗಳನ್ನು ಪೋಲ್ವ | ಸುಕಪೋಲಕದೊಳು| ಮಕರೀಪತ್ರಗಳನು



ರಚಿಪಮಾಡುವೆನಾನು ||೧|| ದೀನರಿಗಭಯದ | ದಾನವಮಾಡುವ | ಪಾಣಿಗೆಯರಶಿನ | ಮಾನಿನಿಪೂಸುವೆ||೨|| ಸುಂದರವಾಗಿಹ | ಕಂಧರತಲದೊಳು | ಇಂದೀವರಾಕ್ಷಿಯೆ | ಗಂಧವಪೂಸುವೆ ||೩|| ಭಾಸುರಶಶಿಮುಖ|ಕೇಶಪಾಶವಿನಾಸು|ಕೌಸುಮಹಾರವ| ಭಾಸುರೆಮುಡಿಸುವೆ

### ಲಕ್ಷ್ಮೀಪರವಾದ ಉರಟಣೆಹಾಡು.

ರಾಗ-ಸುರಟಿ-ರೂಪಕತಾಳ.

(ನಾಗವೇಣಿ ನಗರಿಗೆ ಎಂಬಂತೆ.)

ನೀಲವೇಣಿ | ಲೋಲವಾಣಿ | ಬಾಲಿಕಾಮಣಿ ||ಪ|| ನಾಳಿಕಾಭಮಂಜುಪಾಣಿ | ಶ್ರೀರಮಾಮಣಿ ||ಅ|| ರನ್ನಮಯದಕನ್ನಡಿಗಳ | ಚನ್ನೆನುಜರೆಪ | ಕನ್ನೆಗಳಸುನೀಡರಶಿನ | ವನ್ನುಪೂಸುವೆ ||೧|| ಸರಸವಾದಚೂತದಳದ | ಸಿರಿಯನಿಂದಿಪ | ಕರಗಳನ್ನು ನೀಡುಪ್ರಿಯೆ || ಅರಶಿನಬೊಳೆವೆ||೨||ಲೋಲಚಿಕುರದಿಂದಿಪೊಳೆವ|ಫಾಲತಳದೊಳು | ಬಾಲಹರಿಣನೇತ್ರಿರಚಿಪೆ | ಲೋಲತಿಲಕವಂ ||೩|| ಕೋಕಿಲಾಳಿಕಳಿಗಾನಗಳನ್ನು ಮೂಕಗೊಳಿಸುವ | ಈಕಂಠವನ್ನು ನೀಡುಗಂಧ | ನೀಗಪೂಸುವೆ || ಮಾಲತೀಸುಮಂಗಳಿಂದ | ಲೋಲವಾಗಿಹ | ಮಾಲೆಗಳನುಹಾಕುವೆನವ | ನೀಲಕುಂತಲೆ ||೫||

### ವಧು ತಾಂಬೂಲವ ಕೊಡುವ ಹಾಡು.

ರಾಗ-ಹಿಂದುಸ್ಥಾನಿ-ಕಾಪಿ-ತಾಳರೂಪಕ.

(ಚಿನ್ನದಾಸರ ಎಂಬಂತೆ.)

ಪ್ರಾಣನಾಯಕ | ಶ್ರೀ ||ಪ|| ಜಾಣವೀಳಯವನು ಕೊಡುವೆ | ವಶಾನವನೆಸ್ವೀಕರಿಸ್ಯೆ||ಅ|| ನೀಲರತುನದಿಂ

ದೆಪ್ರೊಳೆವ । ಲೋಲವಾದತಟ್ಟೆಯೊಳಗೆ । ವೀಳಯವ
ನುಇರಿಸಿಕೊಂಡು । ಕೇಳಕೊಂಬೆಕೋಮಲಾಂಗ ॥
ಚಿನ್ನದತಟ್ಟೆಯಪಿಡಿದು । ಎನ್ನತೋಳ್ಗಳೆಲ್ಲವಲಿದು । ಶ್ರಿ
ಷ್ಟವಾಗಿದೋರುತಿವೆ । ಚನ್ನನೆನೀಪಾಲಿಪುದು ॥೨॥ ಪ
ಚ್ಚಕರ್ಪೂರದಿಂದ । ಹೆಚ್ಚಿವಾಸನೆಯನುಕೊಡುವ ।
ಅಚ್ಚತನೆ ವೀಳಯವನ್ನು । ಮೆಚ್ಚಿನೀಡುವೆನುವಾ
ನು ॥೩॥ ಯಾಲಕೀಲವಂಗದಿಂದಮೇಲುಮೇಲಾಗಿಪ್ರೊ
ಳೆವ । ವೀಳಯವನುತೆಗದುಕ್ಕೊಂಡು । ಪಾಲಿಸುಗೋ
ಪಾಲಬಾಲ ॥ ॥೪॥

ರಾಗ-ನಾಯಕಿ-ತಾಳರೂಪಕ.

(ತಾಳಿಜಾದವನಾಡೊ ಎಂಬಂತೆ.)

ವೀಳಯವನುನೀನುಪಾಲಿಸುರಮಣ ॥ಪ॥ ನಾಳಿಕ
ನಯನನೆಕೇಳೆಲೊಜಾಣ ॥ಅನುಪ॥ ಬಾಲೆಯುನಾನಿಂ
ತು । ಕೇಳಿಕೊಂಡರುನೀಂ । ಕೇಳದೊಲಿರುವದು ।
ಜಾಲವಿದೇನೊ ॥೧॥ ಘಟ್ಟಿಯಾಗಿಹಹೇಮ। ತಟ್ಟೆಯ
ಪಿಡಿದು । ರೆಟ್ಟೆಯುನೊಯ್ಯುವದು । ಶಿಟ್ಟೇನೋಜಾಣ॥
ಮಾರಸುಂದರಸುಕುಮಾರನೆಮಾಡಾ । ಕಾರದೊಳಿರ
ಲೇನುನ್ಯಾಯವುಪೇಳೊ ॥ ॥೨॥

ವರನು ತಾಂಬೂಲವನ್ನು ಕೊಡುವಹಾಡು.

ರಾಗ-ತೋಡಿ-ರೂಪಕತಾಳ.

(ನೋಹಮುನೆತಾಳಲೇರ ಎಂಬಂತೆ.)

ವೀಳಯವನುತೆಗದುಕೊಳ್ಳು । ನಾಳಿಕಾಯತಾಂಬ
ಕಿ ॥ಪ॥ ಬಾಲಹರಿಣನೇತ್ರಯುಗಳೆ । ಲೀಲೆಯಿಂದಲೆ
ನ್ನನು । ಜಾಲವನ್ನುತೋರದಂತೆ । ನೀಲಚಿಕುರಭಾಸು



ರ ॥೧॥ ಭಾಸುರಪನ್ನೀರ್ಗಳಿಂ ಪ್ರಕಾಶಮಾನವಾಗಿಹ ।
ಭಾಸಿತತಾಂಬೂಲಿಗಳನು । ಭಾಸುರಮುಖನೀಡುವೆ
ನು ॥೨॥ ಶಾರದೇಂದುಮಂದಹಾಸೆರಾನೀರದಾಭಚಿಕುರ
ಭಾಸೆ ॥ ಗೌರಚಂಪಕಾಭನಾಸೆ । ಚಾರುಕುಸುಮಕೇ
ಶಪಾಶೆ ॥ ॥೩॥

ರಾಗ-ಪೂರಿಕಲ್ಯಾಣಿ-ತಾಳ-ಮಿಶ್ರಜಾತಿ.

(ಯಾಲಿನ್ನೈನಾನಕರಮಾರಹಿ ಎಂಬಂತೆ.)

ಪ್ರಾಣಮಣಿಚಲವೇತಕೆ ॥ಪ॥ ಕುಂಜರಗಾಮಿನಿ
ಮಂಜುಳವೀಳಯ । ವರಿತುಮರತಪ್ರೊಲು । ತೆಗೆಯದಿರ
ು ॥೧॥ ರಾಜಸಮಾನನೆ । ರಾಜಿತಭೂಷಣೆ । ಸುಜನ
ಶರಣಕರಣೆ । ಕಮಲಚರಣೆ ॥೨॥ ಕೋಮಲಗಾತ್ರಿ
ಯೆ । ಶಾಮಲನೇತ್ರಿಯೆ । ಕಮಲವಿಮಲಪದೆ । ರಮ
ಣಿಸುಮಣಿ ॥೩॥ ವೀಳೆಯವನೀವೆನು । ನಾಳಿಕಾನನೆ
ಯೇ । ಕಂಪಿಮುನಿಸದಿರು । ಸರಸದಿರಲೆ ॥ ॥೪॥

ಚಂಡಾಡುವಹಾಡುಗಳು.

ರಾಗ-ಖರಹರಪ್ರಿಯ-ರೂಪಕತಾಳ.

(ಚೆನ್ನದಾನರ ಎಂಬಂತೆ.)

ಚಂಡನಾಡಿದನಾಗ ॥ಪ॥ ಕುಂಡಲೀಂದ್ರಶಯನರಮಾ
ಂಡರೀಕಾಂಬಕಿಯರು ॥ಪ॥ ಮಂದಗಾಮಿನಿಯರಲ್ಲಿ ।
ಥವನ್ನುತಂದುಕೊಡಲು । ಕುಂದಕುಸುಮಕಂತುಕ
। ಚಂದದಿಂಪೂಸಿ । ಪೂಸಿ ॥೧॥ ಇಂದಿರೇಶನಾಗನ್ತು
ಕುಂದಕುರವಕಾರವಿಂದ । ಸುಂದರಪ್ರಸೂನದಿಂ
ಚಂದವಾಗಿಮೆರಯುತಿರ್ಪ ॥೨॥ ನಲ್ಲೆಯುಗನಾಚಿಗೆ

ಯೊಳು . ಸುಮ್ಮನಿರಲು । ಗಲ್ಲವನ್ನು ಪಿಡಿದುನಗಿಸಿ ।
ಮಲ್ಲಿಕಾಸುಮಗಳ ॥ ॥೩॥

ರಾಗ-ಬೇಗಡೆ-ಮಿಶ್ರಜಾತಿತಾಳ.

(ಏನನಾಡಿದೆ ಎಂಬಂತೆ.)

ಚಂಡನಾಡಿದನಾ । ಖಂಡಲವಿನುತನು । ಪುಂಡರೀ
ಕಾಕ್ಷಿಯೊಳು । ಶುಂಡಾಲವರದನು ॥೧॥ ರಾಜೀವನೇ
ತ್ರನು । ರಾಜಾನನೆಯನು । ಸೋಜಿಗಗೊಳಿಸುತ ।
ಜಾಜಿಯಹುವ್ವಿನ ॥೨॥ ಆದಿಮೂರುತಿತಾನು । ಮೋದ
ದಿಸೆರಸದ । ಪಾದಗಳೆನಾಡುತ । ಪಾದರಿಹೂವ್ವಿನ ॥೩॥
ಯಿಂದಿರದೇವಿಗೋ । ವಿಂದರುಸರಸದಿ । ಸುಂದರವಾ
ಗಿಹ । ಕುಂದಸುಮಂಗಳ ॥ ॥೪॥

ರಾಗ-ಕರಹರಪ್ರಿಯ-ತಾಳರೂಪಕ.

(ಮುಟ್ಟದಿರೆಲೊ ಎಂಬಂತೆ.)

ಚಂಡನಾಟವಾಡಿದರಾ । ಖಂಡಲಾರಿವಿನುತರು ॥ಪ॥
ಪುಂಡರೀಕನೇತ್ರರಮಾ । ಕುಂಡಲೀಂದ್ರಶಯನರು॥ಅ॥
ಫುಲ್ಲಸಾರಿಸಾಕ್ಷನುತಾ । ಪಲ್ಲವಾಭವಾಣಿಯೋಳ್ । ...
ಲ್ಲೆ ಗಲ್ಲವನ್ನು ಪಿಡಿದು । ಮಲ್ಲಿಗೆಯಪೂಗಳ ॥೧॥ ಸರಸ...
ವಾಗಿಮಾಡುತಲಾ । ಸರಸಿಯೊಡನೆಸುರಪನು ॥ ಸರಸ...
ಷಾದಪರಿಮಳದಿಂ । ಧರಳಿದವಕುಳಂಗಳ ॥೨॥ ಸುಂದ...
ರಾಂಗನರಸಿಯಮೊಖ । ಚಂದಿರನಲೆನೋಟದಿಂ । ...
ದಾನೋಡಿಸಂತಸದೊಳು । ಮಿಂದುಕುಂದಕುಸುಮದ...



ವಧೂವರರು ಹೇಳುವ ಸರಸದ ಹಾಡುಗಳು.

ರಾಗ-ಬೇಹಾಗ್-ರೂಪಕತಾಳ.

(ಸಾರಸಾಕ್ಷಸಖನುಮನಿಗೆ, ಎಂಬಂತೆ.)

ಈತನ್ಯಾರೊಕಾಣೆಲಾಹ । ಭೀತಿಯಹುದುನೋಡ
ಲು ॥ಪ॥ ಯಾತಕಿಂತುಸೊಬಗಿನಿಂದ । ಭೂತಲದುದ
ಯಿಸಿದರೊ ॥ಅ॥ ನಾಡುನಾಡುತಿರಿಗಿಪಿತನು । ಕಾಡಿಗನ
ನುತಂದನು । ಮಾಡಿಕೊಂಡನೋಲೆಮಾತ । ನಾಡಲೇನು
ಫಲವದು ॥೧॥ ಮಾಯವನ್ನು ತಿಳಿಯದೆನ್ನ । ತಾಯಿ
ಯಿಾತನೇಪರೀ । ನ್ಯಾಯದೊಳನುಮೋಹಿಸಿದಳೊ ।
ಶ್ರೀಯರಸನುಬಲ್ಲನು ॥೨॥ ಬೀದಿಬೀದಿಗಳೊಳುತಿರುಗಿ ।
ವಾದಗಳನುಮಾಡುತ । ಓದುಬರೆವದನುಕನಸಿನೊ ।
ಳಾದರುಕಾಣದವನು ॥ ॥೩॥

ರಾಗ-ಜಂಜೂಟಿ-ರೂಪಕತಾಳ.

(ಇಂದುವದನೆ, ಎಂಬಂತೆ.)

ನೋಡಿರೆಲ್ಲರಿವನಮುದದಿ । ಕೂಡಿಸತಿಯರೆ ॥ಪ॥
ಕಾಡಿನೊಳಗೆದನಗಳಕಾ । ಪಾಡುತಿರ್ಪನ ॥ಅ॥ ವನಿತ
ಮಾರನುಮರಸುತವರ। ಮನೆಯೊಳ್‌ಬೆಣ್ಣೆಯ । ಅನು
ದಿನಿಂದಕದ್ದುತಿಂದ । ವನಸುಸೀತಿಯ ॥೧॥ ಹಾಲುಕೊ
ಡಲುಬಂದವಳನು । ಹಾಳುಮಾಡಿದ । ಬಾಲತನದೊ
ಳೂರಳನೆಳದ । ನಾಲಿಸೀತನು ॥೨॥ ತಂದೆಯಾಜ್ಞೆ ಯ
ನ್ನುವಹಿಸಿ । ಮುಂದುನೋಡದೆ । ವಂಧ್ಯಳಾದಜನನಿಯ
ನ್ನು । ಕೊಂದಶೂರನೆ ॥ ॥೩॥

ರಾಗ-ಕಮಾಚು-ರೂಪಕತಾಳ.

(ಯೇಮಿಸೇತು ಯಟುಲಸೇತು, ಎಂಬಂತೆ.)

ಎಲ್ಲಿಹುಡುಕಿತಂದರೆನಗೀ ।ಹಲ್ಲುಕಿರುಕಗಂಡನ॥ಪಲ್ಲ॥
ಜೊಲ್ಲುಬಾಯಿಕುಳ್ಳುತನವು । ಡೊಳ್ಳುಹೊಟ್ಟೆಗಳನ್ನು॥
ಅನುಪಲ್ಲವಿ॥ ಓದುಯುನಲುಓದನವನು । ಮೋದದಿಂದ
ಸಾಧಿಸಿ । ಬೀದಿಬೀದಿಗಳೊಳುಹಾದು । ಹಾಡಿಜಗಳವಾ
ಡುವವನು ॥೧॥ ದೇಶದೇಶವಾಸಮಾಡಿ । ಭಾಸುರಾಂಗ
ನಾಗಿಹ । ಕೀಚಮುಖನತಂದರೆನಗೆ । ಮೋಸವೇನು
ಹೇಳಲಾಹ ॥೨॥ ನನ್ನಪುಣ್ಯದನ್ನುನಾನು । ಅನ್ಯರಲ್ಲಿಪೇ
ಳಲೇನು । ಘನ್ನಮಾಗಲಿಂತುಸಂ । ಪನ್ನನಿನಗೆಕಾಂತ
ನಾದನು ॥ ॥೩॥

ವಧುವರಸಿಗೆ ಆರತಿ ಎತ್ತುವ ಹಾಡು.

ರಾಗ-ಮೋಹನ-ರೂಪಕತಾಳ.

(ಯಾರಿಗೇನನುಮಾಡಿ, ಎಂಬಂತೆ.)

ಆರತಿಬೆಳಗುವೆನೀರಜಲೋಚನ ॥ಪ॥ ಶಾರದಚಂದಿ
ರಸುಂದರಹಾಸನೆ ॥ ಲಲನೆಯರಿದರೊಳು । ಕೊಳಲನೂ
ದುತವರ ॥ ಒಲಿದುಮೋಹಿಸಿದಾ । ಜಲಧರಶರೀರನೆ ॥
ದನುಜರಕೊಂದಿಳೆ । ಘನಭಾರವನಿಳುಹೆ । ಮನುಜವೇ
ಷತಾಳಿ । ದನಘಮಹಾತ್ಮನೆ ॥೨॥ ಪನ್ನಗಶಾಯಿಯೆ ।
ರತ್ನದಭೂಷಣ । ವನ್ನುಧರಿಸಿದವನೆ । ರನ್ನದಪಾತ್ರೆ
ಯೊಳ್ ॥ ॥೩॥



ವಧೂವರರು ಉಂಜಲಾಡುವ ಹಾಡು.

ರಾಗ-ಯಮುನಾ-ಕಲ್ಯಾಣಿ-ಏಕತಾಳ.

(ಸಖಿಮನಿಗೆ ಹೋಗಬೇಡವೆ, ಎಂಬಂತೆ.)

ಉಂಜಲಾಡಿದಶ್ರೀಹರಿ ॥ಪ॥ ಮಂಜುಳಭೂಷಣಾಪ್ರಂ
ಜವಿರಾಜಿತ । ಕಂಜಲೋಚನನಿರಂಜನನಾಗಲೆ ॥೧॥ಸಾ
ರಹೀರಮಣಿ । ಚಾರದೊಳಾಗಲೆ । ಚಾರುಮಂಟಪವ।
ನೇರದಿಮಾಡಲು ॥೨॥ ಮರಕತಸರಪಣಿ । ಸರಗಳಕ
ಟ್ಟುತ । ಭರದಿರನ್ನಮಣಿಯನ್ನುಹಾಕುತಲಾಗ ॥೩॥
ನಾರಿಯರೆಲ್ಲರು । ಚಾರುಸಿಂಗರದಿಂ । ಸಾರಿಹಾಡುಗಳ
ಹಾರೈಸುತಿರಲು ॥೪॥ ಕಿನ್ನರಕಿಂಪುರುಷಾದಿಗಳೆಲ್ಲರು ।
ಘನ್ನನೆನ್ನುತಲೆಸನ್ನುತಿಮಾಡಲು ॥೫॥ ರಂಭಾಮೇನಕ।
ರಂಭೋರುಗಳು । ಯಿಂಬಿಂದಸಂ । ರಂಭದಿಕುಣಿಯ
ಲು ॥೬॥ ಶ್ರೀರಮಣೀಮಣಿ । ಚಾರುಮುಖಾಂಬು ।
ಸೂರವಾರಿದಶರೀರಸುಂಧರನು ॥ ॥೭॥

ರಾಗ-ಶಹನ-ತಾಳಮಿಶ್ರಜಾತಿ-ಚಾಪ್.

(ಆಡಜನ್ಮಮಾಯೆತ್ತಿ, ಎಂಬಂತೆ.)

ಅಂದಳವಾಡಿದ । ಬೃಂದಾವನಲೋಲ । ಇಂದಿರೆಂಜೊ
ಡನೆಗೋವಿಂದನಾನಂದದಿ ॥ಪಲ್ಲವಿ॥ ನಾರಿಯರೆಲ್ಲರು ।
ಶೋಭಿಸರಪಳಿಗೆಹೀರದಮಣಿಯನು । ನೇರಸಿಕೇರಿಸೆ ॥೧॥
ಶಶಿಮುಖಿಯರುಕೂಡಿ ।ದಶರಥಸುತನನು । ಹಸನ್ಮೊ
ಖುಕೂಡಿಸಿ। ಹಸೆಯನ್ನುಮಾಡಲು ॥೨॥ ಕೋಮಲಾಂಗಿ
ಯರಾಗ।ಹೇಮದಪೀಠವ। ನೇಮದಿತೂಗಲು। ಶ್ರೀಮಹಾ
ಹರಿಯಾಗ ॥೩॥ ಬಾಲೆಯರಾಶ್ರೀ । ಲೋಲನಬಳಸು

ತ । ಲೀಲೆಗಳಮಾಡ । ಲಾಲಿಸೋಹರಿಯುತಾಂ ॥೪॥

## ಬಾಗಿಲು ತೆಗೆಯುವ ಹಾಡುಗಳು.

### ರಾಗ-ಕಾಂಭೋಧಿ-ರೂಪಕತಾಳ.

(ಜಲರುಹನೇತ್ರನೆ, ಎಂಬಂತೆ.)

ಕದವನುತೆಗೆನೀರೆ । ಮುದದಿಂದಲೆಬಾಲೆ । ಸುದತೀ ಶಿರೋಮಣಿಯೆ ॥ಪಲ್ಲ॥ ಕದವನೀಹಾಕಲು । ಹದವನು ಕಾಣೆನು । ಮದನಸುಂದರತನು । ಸದಯಳಾಗುತಬಾರೆ ॥ಅನು॥ ಚೋರನತೆರದೊಳು । ನೀರೀತಿಯೊಳಲ್ಲಿ । ದಾರದದೇಶದಿನಿಲ್ಲುತ । ವಿಚಾರಿಸೂಗುವದಿದು । ಕಾರಣವಾವುದು । ಸಾರುವದುಚಿತವು । ನೀರಜಲೋಚನೆ॥೧॥ ಸೋಮಕನನುಕೊಂದು । ಭೂಮಿತಲದಿಂದು । ಆವುಹಾವೇದಗಳಂ । ನೇಮ್ಮದಿವಿಧಿಗಿತ್ತು । ಯಿಾಮಹೀಶಷ್ಟವ । ತಾಮಸಗೊಳಿಸಿದದ । ಸಾಮಿನರೂಪಿಯೆ ॥ ಮಿನನಾದೊಡೆನೀ । ನಾನಂದದಿಜಲ । ಸ್ಥಾನವಮಾಳ್ಪುದುಬಿಡುತ । ಮಾನವತೆಯರಿರ್ಪ । ತಾಣಕೆಬರತಿದು । ಮಾನವಂತರಕ್ಕಾರ್ಯವ್ವೆ । ಜಾಣನೆನೀಂ ॥೪॥ ಚಂದದಿಂದೊಡಗೂಡಿ । ಬೃಂದಾರಕಾಸುರ । ಬೃಂದವು ಕಡಲೊಳು । ಮಂದರಹಾಕಿ । ಹಿಂದುಮುಂಧರಿಯುದೆ। ಕ್ಷುಂಧನುಪೊಂದಲು । ಚಂದದಿಮೋಲಕೆ । ತಂದಕೂರ್ಮನುನಾನೆ ॥೪॥ ದೊಡ್ಡದಾಗಿರುತಿಹ । ಗುಡ್ಡವಹೊತ್ತಿಡೆ । ದಡ್ಡನಾಗಲುನೀನುಸಂಶಯವೇಸ್ಸೈ ॥ ದೊಡ್ಡದಾಗಿರುತಿಹ । ವಡ್ಡಕೆಲಸವಿಲ್ಲ । ವಡ್ಡನೆಸಿನಗಂತುದೊರೆಯುವದೇನೈ ॥ ॥೫॥



### ರಾಗ-ಶಂಕರಾಭರಣ-ತಾಳ-ರೂಪಕ.

(ಮುದ್ದುಲಪೆಂಡ್ಲಿ ಕುಮಾರ, ಎಂಬಂತೆ.)

ಬಾಗಿಲನೀತೆಗೆರಮಣಿ । ಸುಂದರೀಮಣೀ॥ಪಲ್ಲ॥ ನಾಗವೇಣಿಯರಿರ್ಪ । ಬಾಗಿಲಕಡೆಯೊಳು । ವೇಗದಿನಿಲ್ಲುತ । ಕೂಗುವದುಚಿತವೆ ॥ಅ-ಪ॥ ಕ್ರೂರರೆಹಿರಣ್ಯಾಕಮಾರಣವಮಾಡುತ । ಧಾರುಣಿಯನುತಂದ । ವಾರಾಹರೂಪಿನಾ ॥೧॥ ವರಹವಾಗಲು । ಧಾರುಣಿಯೊಳುಕೊ । ನ್ನಾರಿಗೆಡ್ಡೆಯತಿನ್ನಲ್ । ಸಾರುಕಾಂತಾರಕೆ ॥೨॥ ಹುಡುಗಪ್ರಹ್ಲಾದನ । ಹೊಡೆವಹಿರಣ್ಯಾಕ ದುಡುಕನಮುಕುಹಿದ । ಮೃಡಮಿತ್ರನೃಪಕರಿಯೆ ॥೩॥ ಸಿಂಗದಮೊಗವಿರೆ । ತುಂಗಕಾನನದೊಳು । ಥಂಗೆಮಾಳ್ಪುದುಬಿಟ್ಟು । ಅಂಗನೆಬಳಿಯೇನು ॥೪॥ ಬಲಿಮುಸಮಿಾಪದಿ । ಪೊಲಿಯುತಮೂರಡಿ । ನೆಲವನ್ನುದಾನವ । ಪೊಲಿದವಾಮನನಾನು ॥೫॥ ವಾಮನಾದರೆ । ನೇಮದಿವೇಷವ । ನಾಮದಿಭಜಿಸದೆ । ಕಾಮಿನಿಬಳಿಯೇನು ॥೬॥ ತಂದೆಯಶಾಸನದಿಂದಜನನಿಯನು । ಕೊಂದಭಾರ್ಗವಕುಲ । ನಂದನನೆನಾನು ॥೭॥ ತಾಯಿಯಸಹ್ಕಾರ । ಕೈಯಾರಮಾಡಿದ । ಮಾಯಾಕಾರನೆನಿನ್ನ । ಹೇಯಗುಣಗಳೇನು ॥೮॥ ಜಡೆಗಳಭೂಷಿತಿ ಅಡವಿಯೋಳ್ತಿರುಗುತ ॥ ದುಡುಕರಕ್ಕಸರನ್ನು । ಮಡುಹಿದರಾಮನು ॥ ॥೯॥

### ರಾಗ-ಜಂಜೂಟಿ-ತಾಳಚಾಪು.

(ಅಂಗನರೊಕಾಂತುಡು ಎಂಬಂತೆ.)

ಮಂಗಳಗಾತ್ರಿಯೆಸಿಂಗರಮಾಡು । ತ್ತುಂಗಟಪಾಟನನೀತೆಗೆಯೋ ॥ಪ॥ ಅಂಗಜನರಾಣಿ ಸಿಂಗಡಪಾಣಿ । ಅಂ

ಪಜಕರವೈಯ್ಯಾರಿಗಿಣಿ ॥ ಗುಂಗಕುಚಯುಗಳ । ಭಂಗು
ರರಮಣಿ ॥ಅ-ಪ॥ ನಾರಿಯರಿರುವಯಿಾತೆರಮನೆಯ । ಸೀ
ತಿಯನೀಗುತಬಾಗಿಲೊಳು ॥ ತೆಗೆರತೂಗುವೆ । ಸೀತಿಯ
ಸುಳಿದು ॥೧॥ ನಂದನಕುಲಕೆನಂದನನಾಗಿ । ಸುಂದರಿ
ಯುರನ್ನಾನಂದಿಸುತ । ವಂದಿತನಾಗಿಹ ಮಂದರಧರನೆ ॥
ಕಳ್ಳತನದೊಳು । ನಲ್ಲೆಯರಾಲಯ । ದಲ್ಲಿನಬೆಣ್ಣೆಯ
ಮೆಲ್ಲುತಲೆ । ಕಳ್ಳಗೆಯವೆಮ್ಮಳು । ಯೆಲ್ಲಿದುಕಾರ್ಯ॥೨॥
ಪಾಪಗಳದ್ನು । ಲೋಪಿಸಿ ॥ ಜಗದ । ತಾಪವನಾಶಿಸಜ
ನ್ಮಿಸಿದ । ಕೋಪನೆಯೆಬುದ್ಧನ । ರೂಪಿಯೆನಾನು ॥೪॥
ಹೀನನಸೆವದಿ । ಮಾನವಿಲ್ಲದೆನಿ । ಮರ್ಾಣದಪುರುಷನು
ಮಾನಿನಿಯು । ತಾಣಕೆಬರುವದು । ಮಾನವದೇನು ॥೫॥
ವೈರವಧರಿಶಿ । ಕ್ರೂರದನುಜರ।ವೀರರಮದವನುಮರ್ದಿ
ಶಿದ । ನಾರಿಯೆಕಲಿಯುವತಾರಿಯುನಾನೆ॥೬॥ ವೀರರಕೊ
ಲ್ವ। ಧೀರನುಮಾದರೆ । ರಾರೆಲೊಯುದ್ಧಕೆವೈರಿಯೊಳು
ನಾರಿಯೊಳೇನಿದು । ಪೌರುಷಮಿಂದು ॥ ॥೭॥

ಭೂಮಕ್ಕೆ ಬಡಿಸುವ ಹಾಡು.

ರಾಗ-ಅಠಾಣ-ರೂಪಕತಾಳ.

(ಯುವತೆತಾಳುನಮ್ಮ, ಎಂಬಂತೆ.)

ಭೂಮಕ್ಕೆಬಡಿಸಿದರ್ಕು । ಭಾಮಾಮಣಿ । ತಾಮರಸಾ
ಕ್ಷಿಯರು । ಶ್ರೀರಾಮಚಂದ್ರರ ॥ಪಲ್ಲ॥ ಕೋಮಲಾಂಗಿ
ಯರೆಲ್ಲ । ಕಾಮಿನೀಯುಕಮಹ । ಹೇಮಾಂಬರವುಟ್ಟ
ಶ್ರೀಮೋಹನಾಂಗರ ॥೧॥ ಅಂಗನೆಯರುವೇದೀರಂಗವ
ಮುತ್ತಿ ರಂಗಿನವಲ್ಲಿಯಿಂ । ಶೃಂಗಾರವಮಾಡುತ ।
ಬಾಳೇರುರತುನದ । ಭಾಳದೀಪಗಳನು । ಲೀಲೆಯಿಂ



ದಿರಿಸುತ । ಬಾಳೆಲೆಗಳಹಾಕಿ ॥ ೩ ॥ ಮಿಸುನಿಬಟ್ಟಗಳ
ನ್ನು । ಶಶಿಮುಖಿಯರುಬೇಗ । ಬಿಸರುಹಾಕ್ಷನಭೂಮ।
ದೆಸೆಯೊಳುಪ್ರೋಕ್ಷಿಸಿ ॥ ೪॥ ಲವಣಾವುಮೊದಲಾಗಿನವಷ್ಟೆ
ತೆದವರಿಗೂ । ತವಕದಿಂಬಡಿಸುತ । ನವನೀತಚೋರಗೆ॥
ಸುಂದರೀಮಣಿಯರ ।ಬೃಂದವುಹಾಡನು । ಛಂದದಿಪಾಡ
ಲು । ಯಿಂದಿರೆಯೊಡನೆಯು ॥ ॥೬॥

ರಾಗ-ಕಾಂಭೋದಿ-ರೂಪಕತಾಳ,

(ಜಲರುಹನೇತ್ರನೆ ಎಂಬಂತೆ)

ಭೂಮಕಬಡಿಸಿದ । ರಾಮಂಗಳೆಯರು । ಕಾಮಾಕ್ಷಿ
ಗಿರಿಶರಿಗೆ ॥ಪ॥ ಭಾಮೆರುಮಡಿಗಳ । ನೇಮದಿಧರಿಸುತ।
ಶ್ರೀಮಹಾದೇವಶ್ರೀ।ವಾಮಾಂಬಿಕಿಯರ ॥ಅ॥ ಬಾಳೆಲೆಗ
ಳಹಾಕಿ । ಬಾಲಾಮಣಿಯರು । ನೀಲಬಟ್ಟಲುಗಳಿರಿಶಿ ।
ಲೋಲಪಾಕದಳನ್ನು । ಲೀಲೆಯಿಂಬಡಿಸುತ । ನೀಲ
ಕಂಧರಶ್ರೀ । ಶೈಲಬಾಲಿಕೆಯರ ॥೧॥ ಸರಕಕೋಸುಂ
ಬರಿ । ಕರದಾಂಟೋಜಿಯು । ಪರಿಪರಿಚಿತ್ರಾನ್ನವ । ಸುರ
ಳಹೋಳಿಗೆಮಂಡಿ । ತರದಚಿರೋಟಿಯು । ಸರಸಿಜನೇ
ತ್ರಿಯರ್ಗಿರಿಶಪಾರ್ವತಿಯರ ॥ ॥೨॥

ರಾಗ-ಜಂಜೂಟಿ-ತಾಳರೂಪಕ.

(ರಾಘವನೆರಘುಕುಲಾಬ್ಧಿ - ಎಂಬಂತೆ)

ಭಾಮೆಯರು । ನೀಡಿದರು । ಭೂಮಕ್ಕೆಶ್ರೀ । ರಾ
ಮರ ॥ಪ॥ಕೋಮಲಾಬ್ಜಲೋಚನೆಯರು।ಭೂಮನೋ
ಪದಿಂದಲೆ ॥ಅನು॥ ಸಾರವಾಳಿಶೀರೆಗಳು । ಶೇರಿಭೂಷಿಶಿ
ಮಿಂಗೆ । ಹೀರಹಾರಗಳನುಧರಿಸಿ ಸಾರಸಾಕ್ಷಿರಾಮರ ॥
ಸಿಂಗರದವೇದಿಯಲ್ಲಿ । ರಂಗವಲ್ಲಿಯನಿಟ್ಟು । ಮುಂಗಡೆ

ಹೊಳೆಯುವ ಕದಳಿಗಳನು । ಸಿಂಗರಿಸುತವಿಂಗೆ ॥೨॥ ಚೆನ್ನದ ಬಟ್ಟಲುಗಳ ಹಾಕಿ । ರನ್ನದೀಪಗಳನು । ಕನ್ನಿಕೆಯರ ಸ್ಥಿರಿಸಿ । ಪನ್ನಗೇಂದ್ರಶಾಯಿಗೆ ॥೩॥ ಸರಸಕೋಸುಂಬರಿಯುಪಲ್ಯ । ತರತರದಹುಳಿಗಳಂ । ಪರಿಪರಿಚಿತ್ರಾನ್ನಗಳನು । ತರುಣಿಯರುನೀಡುತ ॥೪॥ ಹೋಳಿಗೆಮಂಡಿಗೆಲಾಡು । ಪೋಳಿಗಳನುಬಡಿಸುತ । ಬಾಲೆಯರುಮಂಗಳಗಳ । ಲೀಲೆಯಿಂದಪೇಳುತ ॥೫॥

ಭೂಮಕ್ಕೆ ಆರತಿಯೆತ್ತುವ ಹಾಡು

ರಾಗ-ಯದುಕುಲಕಾಂಬೋಧಿ-ತಾಳರೂಪಕ

(ಜಲರುಹನೇತ್ರನೆ ಎಂಬಂತೆ)

ಸಾರವಾಳಿಯನುಟ್ಟು ನಾರಿಯರೆಲ್ಲರು । ಹೀರಹಾರವಧರಿಸಿ । ಚಾರುಮಂಗಳಗಳ । ವಾರವಪೇಳುತ । ಹೀರದತಟ್ಟೆಯೊ । ಳಾರತಿಬೆಳಗಿದರು ॥೧॥ ಶಾಕಮುಖಮಾದ್ಯ । ಪಾಕಗಳೆಲ್ಲವ । ಶ್ರೀಕರನಿಗೆಭೂಮಕೆರಾಕೇಂದುಮುಖಿಯರು ॥ ನೀಡುತಮುದದೊಳು ॥ ಶ್ರೀಕರಮಂಗಳ । ವಾಕುಗಳುಪೇಳಿ ॥೨॥ ಗಾಡಿಕಾತಿಯರೆಲ್ಲ । ನೀಡುತಭೂಮಕೆ । ಹಾಡುಗಳನೆಲ್ಲಪಾಡುತಲಾಗ । ಬೇಡಿದಬಯಕೆಯ । ನೀಡುವರಾಮಗೆ । ಕೂಡಿನೀರಾಜನ । ಮಾಡಿದಾಗಲೆ ॥೩॥

ರಾಗ-ಶಹನ-ತಾಳಚಾಪು.

(ಆಡಜನ್ಮವು ಎಂಬಂತೆ)

ಆಪೋಶನಹಾಕೆ ॥ ಪಾಪಾಪಹಾರಕೆ । ಗೋಪಾಲಬಾಲಕ । ನಾಪಾಣಿಕಮಲಕೆ ॥ಪ॥ ಬಂಧುರವಾಗಿಹ । ಮಂದರಧರವನಾ । ನಂದಬಿಯೆತ್ತಿದ । ಸುಂದರಪಾಣಿಗೆ ॥



ಗೋಪಾಂಗನೆಯರ । ನಾಪರಿವಂಚಿಸಿ । ಆಪರಿಬೆಣ್ಣೆಯ ಲೇಪಿಸಿದಕರಕೆ ॥೨॥ ಮಂದಾರುಲೋಕಕೆ । ಮಂದಾರವಾಗಿಹ । ಚಂದಿರವದನಗೆ । ಸುಂದರಾಂಗಕನಿಗೆ ॥೩॥

ರಾಗ-ನಾಯಕಿ-ತಾಳ-ರೂಪಕ.

(ಶೀತಕಿರಣನೆನ್ನ ಎಂಬಂತೆ)

ಆಪೋಶನಹಾಕೆತಾಪಾಪಹಾರಕೆ । ಶ್ರೀಪತಿಕುಲನಾಯಿಕೆ ॥ಪಲ್ಲ॥ ತಾಪಸಜನಪರಿ । ತಾಪಹಾರಕಶ್ರೀ । ಗೋಪಾಲನಂದನ । ನಾಪಾಣಿಕಮಲಕೆ ॥೧॥ ಲೋಕಾಹಿತಗಳ । ನೇಕವಮಾಡಿದವರ । ನೇಕಭಕ್ತಿಯೊಳೊಲಿಯುತ ಪ್ರಾಕೃತಜನರಸಿರಾಕರಿಸದೆನೆರೆ । ಸಾಕುವಶ್ರೀಹರಿಯಾಕರಕಮಲಕೆ ॥೨॥ ಬೃಂದಾರಕವರ । ಬೃಂದಕಾವಾಸವ । ನಂದದೊಳೆಸಗಿರುವ । ಸುಂದರವಾಗಿಹ । ಮಂದರವನುಲೀಲೆ । ಯಿಂದಲೆತ್ತಿದಗೋವಿಂದನಪಾಣಿಗೆ ॥೩॥ ಲೀಲಾಮಾನುಷ । ಬಾಲನವೇಷವ । ತಾಳುತಗೋಪಿಯರ । ಕೇಳದೆಮನೆಯೊಳು । ಹಾಲುಬೆಣ್ಣೆಗಳನು । ಲೀಲೆಯಿಂಕದ್ದಿಹ । ಬಾಲನಪಾಣಿಗೆ ॥೪॥

ಆಪೋಶನಹಾಕುವ ಹಾಡು.

ರಾಗ-ಬೇಹಾಗ್-ತಾಳ-ರೂಪಕ.

(ಯಾರನೀನನ್ನಬಾರದೆ ಎಂಬಂತೆ)

ಬಲೆಯಾಪೋಶನಹಾಕ । ಬಾಲನಕೈಗೆ ॥ಪಲ್ಲ॥ ವರಗೋಪಬಾಲೆ । ಯರಮುಂದೆಮೋಹ ॥ ಬೆರಳಿಕೊಳಲ । ನುಡಿಸುತವರ । ಮನಸವಮುದಿಸಿದವನಕೈಗೆ ॥೧॥ ದುರುಳಹಿರಣ್ಯಾಕ । ಸುತವನ್ನುಸೀಳಿ । ಶರಣಾವರನಪೊರೆದತರುಣ । ಶರಧಿಹರಿಯುಕರಸರೋಜಕೆ ॥ ೨ ॥ ಸುರಲೋಕ

ವೆಲ್ಲ । ಪರಿಬಾಧೆಯಿಲ್ಲ । ದೊರೆದುಪೊರೆವ । ದಿತಿಸುಸು
ತರಮುದವಕೆಡಿಸಿದೆವನಕ್ಕೈಗೆ ॥೩॥

ರಾಗ-ಶಂಕರಾಭರಣ-ತಾಳ-ಚಾಪ್

(ಮಂದಯಾನೆಸುಂದರವದನೆ ಎಂಬಂತೆ)

ಶೈಲಬಾಲೆ ॥ ಮಂಗಳಶೀಲೆ । ನಾಳಿಕಾನನೆಯುಪ್ರೋಕ್ಷ
ನಹಾಕಲೋಲನೇತ್ರಿ ॥ಪಲ್ಲ॥ ಕಾಲನಬಾಧೆಯತಾಳದ
ಮೌನೀಯು । ಬಾಲನಪೊರೆದಶ್ರೀಕೈಲಾಸಪತಿಗೆ ॥೧॥
ಮೇರುಪರ್ವತವನು । ಸಾರಬಾಣವಗೈದು । ಕ್ರೂರರ
ಮಡುಹಿದಧೀರನಕ್ಕೈಗೆ॥೨॥ ಭೋಗಿಪತಿಯಹೆದೆಯಾಗಿ
ಮಾಡೀವನ ನಾಗಭೂಷಣೆನಿಗೆನಾಗವೇಣಿಯನೀಂ ॥೩॥

ಹೆಣ್ಣಿನವರು ಬೀಗತಿಯನು ಎಚ್ಚರಿಸುವಹಾಡು.

ರಾಗ-ಕಮಲಾಮನೋಹರಿ-ತಾಳಆದಿ.

(ಹೀಗಂಬರನೆರೆಕಾಗಿ ಎಂಬಂತೆ)

ಏಳತ್ತಿಗೆಯೆಪರಾಕು । ಈಗ । ಕೋಳಿಕೂಗಿತೇನೆ
ಯೇಳುಮಧ್ಯಾಹ್ನದಿ॥ಪ॥ಜಾಲಬಟ್ಟಗಳನು । ಮೇಲೆ
ಹಾಕಿಕೊಂಡು । ಜೋಲುಬಾಯಿಸೋಳೇನು । ಖಳೋ
ಚಪ್ಪರಿಸುವೆ ॥೧॥ ಬಾಲರಜೊತೆಯೊಳು । ಹೇಲುಬ್ಬಿಗ
ಳಿಂದ ಮೇಲಾದಪರಿಮಳವಾಲ್ಯೆಸುತಿರುವೆಲೆ ॥೨॥ ಭಾವ
ರಮಣರುಗಳಾವಾಗಲೆಯೆದ್ದು । ಭಾವಿಶಿಮನೆಗೆಲಸಮಾ
ಡಿದರು ॥೩॥ ಊರೆಲ್ಲಜನಗಳು । ಹಾರೈಸುತಿರುವರು ।
ಪೋರಿಯೆನಿನ್ನಯಕಾರಣವರಿಯಲು ॥೪॥ ನೆನ್ನಯಕೆಲ
ಸಗಳನ್ನುನಿನ್ನಯಭಾವ । ನನ್ನೆಯಿಂಮಾಡಿಹನು । ಬಿ
ನ್ನಣಿಮಿನ್ನೇನು ॥೫॥



ಗಂಡಿನ ಕಡೆಯವರು.

ರಾಗ-ನೋಟ್-ಏಕತಾಳ.

(ಬಿಜಯಂಗ್ಯೆಯುತ್ತಾಲ್ ಎಂಬಂತೆ)

ಸರಿಯೇನೆಸರಿಯೇನೆಬರೆದೆದೂರುವದು ॥ಪಲ್ಲ॥ ತರ
ವಲ್ಲವುಸರಿಯೇನಿದು । ಬರಿದೇಯುಸುರುವದು ॥ಅ॥ಮ
ನೆಯಂಗಳಕನುವಾಗುತ । ಬೆನಬಿಸಲದುಬರಲು ॥ ಜ
ನರನ್ನರೆಮರೆಮಾಚಲು । ಘನತೆಯುಸೇನೊರೆವೆ ॥ ೧ ॥
ಭರದಿಂದೀ । ಪರಿಕಂಗಳ । ನೊರಸುತಲಾಸರದಿ । ಬರ
ಬೇಕೆನುತರೆನೋಟದಿ । ಪರಕಿರೇತೆರದಿ ॥೨॥ನಡುದಾರಿ
ಯೊಳೆಡವುತಲೆ । ಕಡುನಿದ್ರೆಯಭರದಿ । ಕಂಡದಂಡದಿ
ಬಿಡದಾಲುತ । ಸಡಗರದೊಳುಬರುತ ॥೩॥

ಹೆಣ್ಣಿನ ಕಡೆಯವರು.

ರಾಗ-ಪಂತುವರಾಳಿ-ರೂಪಕತಾಳ.

(ನಾರಾಯಣಿನಿಗಮವಿನುತ ಎಂಬಂತೆ)

ಏಳೇಮಿರಾರಿಪೋರೀ । ಏಳೇಸಿದ್ಧಯುಸಾಕು ॥ಪಲ್ಲ
ಏಳುಮುಂಜಾನೆಯಾಯ್ತು । ಏಳತ್ತಿಗೆಪರಾಕು ॥ಅನು॥
ಈಕಾದಿಕಂತೆಗಳೊಳು । ಕಾಕಾಂಬಕಿಯೆಮಲಗಿ।ಯಾ
ಕಿಂತುಗುರಿಕೆಗಳನು । ಹಾಕುತ್ತನಿದ್ರೆಗೈವೆ ॥೧॥ ಹಾ
ಸಿಗೆಯನ್ನುಮಿರುವೆ । ರಾಶಿಯುಮುತ್ತುತಿಹದು । ಹೇ
ಶಿಕೆಯಿಲ್ಲದೇನು । ವಾಸನೆಯನ್ನುಸೈಪೆ ॥೨॥ ಜಲ್ಲಿನನೀ
ರಿನಿಂದ । ಲಿಲ್ಲಿಹಜಾಲುಗಳನು । ಮೆಲ್ಲಸೆಯಿರಿಕೊಂ
ಡುಯಿಲ್ಲೆಂತುನಿದ್ರೆಗೈವೆ ॥೪॥

## ಹೆಣ್ಣಿನ ಕಡೆಯುವರು.

ರಾಗ-ಭೂಪಾಳಿ-ಚಾಪ್‌ತಾಳ,

(ಸುರಜಾಲಪಾಲನೆ ಎಂಬಂತೆ)

ನೋಡಿರೆಬೀಗಿತಿ । ಗಾಢನಿದ್ರೆಯೊಳೀಗ । ಲ್ಲಾಡು
ತಬ್ಬರುವದು ॥ ಗಾಡಿಕಾತಿಯರೆಲ್ಲ ॥೧॥ ನಿನ್ನೆಯುಭೋ
ಜನ । ವನ್ನು ಕರಗಿಸಲು । ಘನ್ನನಿದ್ದೆಯಿಬ್ರೋದ ॥ ರಿ
ನ್ನುತೇಗುವನು ॥ ೨ ॥ ಬಾಯೊಳುಜಲ್ಲನು । ಪಾಯದಿ
ವದರುತ । ಮಾಯಾಗಾತಿಯುಬರ್ಪ । ಮಾಯುವನೋ
ಡಿರೆ ॥ ೩ ॥ ನಿದ್ದೆಯುಮನೆಯೊಳು । ಸದ್ದುಮಾಡದೆವ
ಲಗಿದ್ದುಯೆಬ್ಬರಿಸಲು । ಮುದ್ದಾಗಿರುವಳು ॥೪॥

## ಗಂಡಿನವರು.

ರಾಗ-ಭೂಪಾಳಿ-ಚಾಪ್‌ತಾಳ.

(ಸುರಜಾಲಪಾಲನೆ ಎಂಬಂತೆ)

ಪೊಳ್ಳುಬೀಗಿತಿಯುನಿಲ್ಲದೆಕೂಗುವ । ಜಲ್ಲುಮಾತುಗ
ಳನ್ನು । ಯುಲ್ಲರುಕೇಳರೆ ॥೧॥ ನಿನ್ನೆಇವರಮನೆಯುನ್ನ
ವೇಕಾಣಿವು । ಬಿನ್ನಾಣತನದೊಳು । ಬಣ್ಣಿಪುದುದೀಗ
ಲೆ ॥ ೨ ॥ ತಮ್ಮಗುಣಗಳನ್ನುಯೆಮ್ಮೊಳಾರೋಪಿಶಿ ।
ಎಮ್ಮಕೋಣಗಳಂತೆ । ಸುಮ್ಮನೆಕೂಗುವದು ॥ ೩ ॥
ಏಳುಮಧ್ಯಾಹ್ನದಿ । ಘಾಳವತೊಳಯುದೆ । ಬಾಲರೊ
ಳೀಕಿಯು । ಕೊಲಾಹಲವೇನು ॥ ೪ ॥ ತನ್ನನುಭೂಷಿ
ಸು । ತನ್ನರಸಿಂಧಿಪ । ಬಿನ್ನಾಣಿಬೀಗಿತಿ ॥ ಯನ್ನನು
ಸೀವಾರಿಶಿ ॥೫॥



## ಹೆಣ್ಣಿನವರು.

ರಾಗ-ಶಂಕರಾಭರಣ-ತಾಳಚಾಪ್.

(ಮುದ್ದುಲಪೆಂಡ್ಲಿಕುಮಾರ ಎಂಬಂತೆ)

ಮಾಳಿಗೆಮೇಲೇನೆಭೋಗವು । ಲೀಲೆಯೇನೆ ॥ಪಲ್ಲ॥
ಮಾಳಿಗೆಮೇಲೆಯೆ । ಸೂಳೆಜನಗಳೊಳು । ಖೂಳಭು
ಜಂಗರೋಳ್ । ಲೀಲೆಗಳಾಡುತ ॥೧॥ ಕೋಳಿಕೂಗದ
ಮುಂದೆ । ಬಾಲರಮರೆಸುತ । ಯೇಳುತ್ತಲೀಪರಿ ।
ಕೋಲಾಹಲದೊಳು ॥ ೨ ॥ ಹತ್ತುಮಕ್ಕಳನೀಸು । ಹೆ
ತ್ತರುನಿನ್ನಯು । ಬಿತ್ತರಪೋಗದೆ । ಮತ್ತೆಪುಂಡರೊ
ಳೀಗ ॥೩॥ ಮೊಗದೊಳುಬೆವರಿದು । ನಗೆಯುವದೇನು
ಜ । ನಗಳುಕಂಡರೆತಾವು । ನಗುವದಿಲ್ಲವಿದೇನೆ ॥೪॥

## ಗಂಡಿನವರು.

ರಾಗ-ಶಂಕರಾಭರಣ-ತಾಳಚಾಪ್.

(ಮುದ್ದುಲಪೆಂಡ್ಲಿಕುಮಾರ, ಎಂಬಾತೆ.)

ಏನೆಂದುಕೂಗುವೆ । ಪೋರಿಯೆ । ಮಿತಿಾರಿಯೆ ॥ಪ॥
ಏನೆಂದುಕೂಗುವೆ । ಕಾಣದೆನಿನ್ನಯು । ಮಾನಕ್ಕೆಸರಿ
ಯಾದ । ಹೀನಮಾತುಗಳನ್ನು ॥ ೧ ॥ ಪೋಲೀಜನಗ
ಳೊಳು । ಬೀಳುಕೆಲಸಗಳಿಂ । ಲೀಲೆಮಾಡುವತೆರ । ಕೀ
ಳುಮಾತುಗಳನ್ನು ॥ ೨ ॥ ನಿನ್ನಯುಶೀಲವ । ನಿನ್ನ
ಕೋರಿಪುದೇಕೆ । ಮನ್ನಣೆಮಾತುಗಳನ್ನು ನೀನಲಿಯು
ದೆ ॥೩॥ ಸಾಕುನಿನ್ನಯುಖುಲ । ವಾಕುಗಳೇತಕೆ । ಜೋ
ಕುಮಾಡುತನೀ । ಕುಬುದ್ಧಿಯೊಳೆನ್ನ ॥ ॥೪॥

### ಬೀಗರ ಉರಟಣೆ ಹಾಡುಗಳು.

ರಾಗ-ಪೂರಿಕಲ್ಯಾಣಿ-ಏಕತಾಳ.

(ಯಾಲಿನ್ನೈಸನಸಮಾರಹಿ, ಎಂಬಂತೆ.)

ನಾರಿಯರೆಲುರುಟಣೆಗೆ ॥ಪಲ್ಲವಿ॥ ಮೋಟಿಗೋಡೆಗಳ
ನು । ದಾಟುವಘಟವಾಣಿ । ಪ್ರೋಟುಬೀಗತಿಯು ॥ಅ॥
ಧೂಟಿಯರೆಲ್ಲ ॥ ೧ ॥ ಒಡಲೊಳುಗುಡುಗುತಡುಡುಕ
ಸಾರುವ । ಬೆಡಗುಗಾತಿಯನು । ಸಡಗರದಲಿ ॥೨॥ ನಾ
ಚಿಕೆಯಿಲ್ಲದೆ । ಪಾಚಿಯಹಲ್ಲನ್ನು । ಚಾಚುವಬೀಗಿತಿ
ಯಾಚಿಗೆಸೀವು ॥ ॥೩॥

ರಾಗ-ಗೌಳವಂತು-ರೂಪಕತಾಳ.

(ಗಜವದನಗಣನಾಥ, ಎಂಬಂತೆ.)

ತರುಣಿಯರೆಕರಿರೆ । ಬೀಗತ್ತಿಯು ॥ಪಲ್ಲವಿ॥ ಮೊರತ
ಸದಿಂದ । ಕರಟುನುಡಿಯಪೇಳ್ವೆ । ವರಟುಬೀಗಿತ್ತಿಯು
ನುರಜಣಿಮಾಡಲು ॥೧॥ ತನ್ನಯಗುಣಗಳ । ನನ್ಯರೋ
ಳ್ಪೇಳುತ । ಕಣ್ಣುಸನ್ನೆಯಮಾಳ್ಪ । ಬಿನ್ನಾಣಗಿತ್ತಿ
ಯು ॥೨॥ ಹೇಳದಮಾತನುಕೇಳದೆತಾನೆ । ಬೀಳುಕವ
ಗುಗಳನು । ಪೇಳುವರಗತಿಯು ॥ ॥೩॥

### ಬೀಗರು ಚಂಡಾಡುವ ಹಾಡುಗಳು.

ರಾಗ-ಸುರಟಿ-ರೂಪಕತಾಳ.

(ನಾಗವೇಣಿ ಎಂಬಂತೆ.)

ಚಂಡನಾಡಿದಳುಪಿರಂಗಿ । ಗುಂಡನಾಡಿದಳು ॥ಪಲ್ಲ॥
ಘಟವಾಣಿಬೀಗತಿ । ಪುಡಿನೆಗೆದು । ಕಟಕಟನೆಹಲ್ಲುಕಡಿ
ದು । ಪಟುತರವಾದ ॥೧॥ ತಾಳಮರಗಳಂತಿಹ । ತೋ
ಳಬೀಸುತ । ಭಾಳವಾಗಿಹೊಣಪೋದ । ಬಾಳೆಪೂಷ



॥೨॥ ಕಲ್ಲುಗಳನುಬೀಸುವಂತೆ । ನಲ್ಲೆಶಕ್ತಿಯಿಂ ।
ಕಲ್ಲಪಲ್ಲುರೆನುತಕುಣಿವ । ಕಳ್ಳಿಪೂಗಳಿಂ ॥೩॥

ರಾಗ-ಯಮುನಾ-ಕಲ್ಯಾಣಿ-ಆದಿತಾಳ.

(ಆಹಾಇದೇನಿದು ಸಫಲವಾದುದು, ಎಂಬಂತೆ.)

ಕಂತುಕವಾಡಿದಳ್ । ಜಾಲು । ಬಂತೆಯಾಡದಳ್ ।
ಜೊತೆಗಾತಿಬೀಗಿತೀಯು । ದೆಂತುವಿವರಣೆ ॥ಪಲ್ಲ॥ ದೊ
ಡ್ಡಹೊಟ್ಟೆಯಂ । ಅಡ್ಡಮಾಡುತ । ಗಿಡ್ಡಕೈಯ್ಯಾಡಿರು
ಸುತೀ । ಹೆಡ್ಡಬೀಗಿತಿ ॥೧॥ ಕೊಳತಕಂಪಿನಿಂ । ಬೆಳ
ದಪೂಗಳ । ಪೊಲಿದುಪೋಣಿಸುತ್ತಮುದವ । ತಳೆದು
ಬೀಸುತ ॥೨॥ ಕೈಗಳಿಂದಸಿರೆ । ಮೂಗನೊರಸುತ ।
ಭೋಗಿನಿಶಿಖಾಮಣಿಯು । ಕೂಗುತೀಪರಿ । ಆಹಾ ॥೩॥

### ಬೀಗಿತ್ತಿಯರಿಗೆ ಹುವ್ವುಮುಡಿಸುವ ಹಾಡುಗಳು.

ರಾಗ-ಜಂಜೂಟಿ-ರೂಪಕತಾಳ.

(ಇಂದುವದನೆ ಎಂಬಂತೆ.)

ಪೂಗಳನ್ನುಮುಡಿಶಿರಮ್ಮ । ನಾಗವೇಣಿಯರೆ ॥ಪಲ್ಲ
ಭೋಗಿನೀಶಿರೋಮಣಿಯಿರಾ । ಬೀಗಿತಿಯರಿಗೆ ॥ಅ॥
ಚಂದವಾಗಿಕೊಜ್ಜೆಸೀರಿ । ಸಿಂಪರಿಳಿಪ । ಅಂದವನ್ನು
ಗೆಡಿಪ । ಗಂಧ । ಬಂಧುರವಾದ ॥೧॥ ಸಿಲ್ಲಗೊಡಿಸದಂ
ತೆಭಾಳ । ನಲ್ಲಗಂಧವ । ಮೊಲ್ಲನೆತಲೆತೋರಗೊಳಪ ।
ನಲ್ಲೆಯರರಳೆ ॥೨॥ ವರಟುಕರಗಳಿಂದಲೀಗ । ಹರಕು
ತಲೆಯನು । ಪರಿಕಿಸಿಸರಿಮಾಡುತಿರುವ । ವರಬುಬೀಗಿ
ತ್ತಿಯನು ॥ ॥೩॥

ರಾಗ-ಬೇಹಾಗ್-ರೂಪಕತಾಳ.

(ಸಾರಸಾಕ್ಷಿಸಖನು ಮನೆಗೆ ಎಂಬಂತೆ.)

ಪೂಗಮಲ್ಲಿಕೇತಕಾದಿ । ಪೂಗಳನ್ನುಮುಡಿಸರೆ॥ಪ॥

ನಾಗವೇಣಿನಾರಿಯರು । ಬೀಗಿತಿಯರಿವರಿಗೆ ||ಅ|| ಘಲ್ಲಿ
ಘಲ್ಲರೆಂದುಕುಣಿಯು । ತಿಲ್ಲಿಬರಲುಬೀಗಿತಿ । ವಲ್ಲಭರಾ
ಯನತಿಮೋದ । ದಿಲ್ಲಿಸರಸವಾಡಲು ||೧|| ಪೋಟುಜ
ನರೊಳಾಡಿಮುದಿಸಿ । ನೀಟುನೋಟದಿಂದಲೆ । ಸಾಟಿಯಿ
ಲ್ಲವಂದುಮೆರವ । ತಾಟಕಿಬೀಗಿತ್ತಿಗೆ ||೨|| ಅಂಗನೆಯ
ರೆಲ್ಲಕೂಡಿ । ತೆಂಗಡಿಕುಸುಮಂಗಳಂ । ರಂಗಿನಿಂದಪೋ
ಣಿಸುತಲೆ । ಸಿರಬೀಗಿತ್ತಿಗೆ || ||೩||

ಬೀಗರು ಭೋಜನಕಾಲದಲ್ಲಿ ಹೇಳುವ ಹಾಡುಗಳು.

ಗಣೇಶಪ್ರಾರ್ಥನೆ.

ರಾಗ-ಕಾಂಭೋದಿ-ತಾಳ ಹಿಂದುಸ್ತಾನಿ-ಚಾಪು

